1
ಜುಲೈ-ಸೆಪ್ಟೆಂಬರ್

# ವೈಜ್ಞಾನಿಕ ಜಾಗ್ರತಿ ವರ್ಷ-2004

## ವಾರ್ತಾ ಪತ್ರ

जय विज्ञान JAI VIGYAN
2004
वैज्ञानिक जागरूकता वर्ष
Year of Scientific Awareness

ಸಂಕಲನ : ಶ್ರೀಮತಿ ಹರಿಪ್ರಸಾದ್



ಪ್ರೊ॥ ಯು.ಆರ್. ರಾವ್, ಮಾಜಿ ಅಧ್ಯಕ್ಷರು, ಇಸ್ರೋ ವೈಜ್ಞಾನಿಕ ಜಾಗ್ರತಿ ವರ್ಷಾಚರಣೆಯನ್ನು ಉದ್ಘಾಟಿಸುತ್ತಿರುವುದು ಚಿತ್ರದಲ್ಲಿ (ಎ-ಬ) ವೈ ಜಾ ವ ರಾಜ್ಯ ಸಂಯೋಜಕರಾದ ಶ್ರೀ ಸಿ. ಯತಿರಾಜು ಪರಿಸರ ತಜ್ಞ ಪ್ರೊ॥ ಮಾಧವ ಗಾಡ್ಗೀಳ್ ಕರಾವಿಪ ಗೌರವ ಕಾರ್ಯದರ್ಶಿ ಡಾ॥ ಎಚ್.ಎಸ್.ನಿರಂಜನ ಆರಾಧ್ಯ ಮತ್ತು ಶ್ರೀ ಎಸ್. ಬಿ. ಹಳ್ಳಿ ಅವರನ್ನು ಕಾಣಬಹುದು.

ಸಂಘಟನೆ

ತುಮಕೂರು.

*Catalysed and Supported By*
RVPSP, DST, Govt. of India
New Delhi

राविप्रौसंप NCSTC

# ವೈಜ್ಞಾನಿಕ ಜಾಗ್ರತಿ ವರ್ಷ - 2004

## ರಾಜ್ಯ ಹಾಗೂ ಜಿಲ್ಲಾ ಸಮಿತಿ ಸಂಚಾಲಕರು

1. ಡಾ. ಎಚ್.ಎಸ್.ನಿರಂಜನ ಆರಾಧ್ಯ
   ಸಂಚಾಲಕರು ರಾಜ್ಯ ಸಮಿತಿ
   ಫೋನ್ : 080-23340509
   ಟೆಲಿಫ್ಯಾಕ್ಸ್ : 080-23460363

2. ಶ್ರೀ ಸಿ. ಯತಿರಾಜು
   ರಾಜ್ಯ ಸಂಯೋಜಕರು
   (ಒಳನಾಡು ಪ್ರದೇಶಗಳು ಕರ್ನಾಟಕ)
   ಫೋನ್ : 080-23340509
   ಟೆಲಿಫ್ಯಾಕ್ಸ್ : 080-23460363

3. ಶ್ರೀ ವಿಜಯಕುಮಾರ್ ಸರ್ವದೆ
   ರಾಜ್ಯ ಸಂಯೋಜಕರು
   (ತೀರ ಪ್ರದೇಶಗಳು ಕರ್ನಾಟಕ)
   ಫೋನ್ : 0831-2470832

### ಬೆಂಗಳೂರು ನಗರ

4. ಡಾ. ವೈ. ತುಳಜಪ್ಪ
   ಫೋನ್ : 080-26720864

### ಬೆಂಗಳೂರು ಗ್ರಾಮಾಂತರ

5. ಶ್ರೀ ಚಳ್ಳಕೆರೆ ಯರ್ರಿಸ್ವಾಮಿ
   ಮೊಬೈಲ್ : 94481 33433

### ಮಂಡ್ಯ

6. ಶ್ರೀ ತಿಮ್ಮಪ್ಪ ಹನಕೆರೆ
   ಫೋನ್ : 08232-274006

### ಕೋಲಾರ

7. ಪ್ರೊ. ಸಿ.ನಾಗರಾಜು

### ತುಮಕೂರು

8. ಶ್ರೀ ಬಿ. ಮರುಳಯ್ಯ
   ಫೋನ್ : 0816-2275183 (ಕಛೇರಿ)
   0816-2290985 (ಮನೆ)

### ಚಿತ್ರದುರ್ಗ

9. ಶ್ರೀ ನಾಗೇಂದ್ರ ಚೌಧರಿ
   ಫೋನ್ : 08194-227137(ಕಛೇರಿ)
   ಮೊಬೈಲ್ : 9880072787

### ಕೊಪ್ಪಳ

10. ಶ್ರೀ ಬಸವರಾಜ ಬಸಪ್ಪ ಬಲ್ಲಾರ

### ರಾಯಚೂರು

11. ಪ್ರೊ. ಸಿ. ಡಿ.ಪಾಟೀಲ್
    ಮೊಬೈಲ್ : 94484 27585

### ಹಾಸನ

12. ಶ್ರೀ ಎಚ್. ಆರ್. ಸ್ವಾಮಿ
    ಫೋನ್ : 08174 - 33029

### ಬಳ್ಳಾರಿ

13. ಡಾ. ಗಿರಿಧರ ರಾವ್ ಹವಾಲ್ದಾರ್
    ಮೊಬೈಲ್ : 94484 05098
    ಫೋನ್ : 255292(ಮನೆ)

### ಮೈಸೂರು

14. ಎ. ಜಗನ್ನಾಥ್
    ಫೋನ್ : 0821-2542694 / 2543135
    ಮೊಬೈಲ್ : 94480 50595

*(3ನೇ ರಕ್ಷಾ ಪುಟ ನೋಡಿ)*

# ಕರ್ನಾಟಕದಲ್ಲಿ ವೈಜ್ಞಾನಿಕ ಜಾಗ್ರತಿ ವರ್ಷ-2004

ವೈಜ್ಞಾನಿಕ ಮನೋಭಾವ ಮತ್ತು ಮಾಹಿತಿಗಳನ್ನು ಬೃಹತ್ ಪ್ರಮಾಣದಲ್ಲಿ ವಿಶಾಲ ಜನ ವಿಭಾಗಗಳಲ್ಲಿ ಬಿತ್ತರಿಸುವ ಕೆಲಸಗಳನ್ನು ಭಾರತ ಸರ್ಕಾರ ವಿವಿಧ ಜನ ವಿಜ್ಞಾನ ಸಂಘಟನೆಗಳ ಮೂಲಕ ಕಳೆದೆರಡು ದಶಕಗಳಿಂದ ನಿರಂತರವಾಗಿ ಮಾಡುತ್ತಾ ಬರುತ್ತಿದೆ. ಈ ದಿಸೆಯಲ್ಲಿ 1987ರ ಭಾರತ ಜನ ವಿಜ್ಞಾನ ಜಾಥಾ ಮತ್ತು 1992ರ ಭಾರತ ಜನ ಜ್ಞಾನ ವಿಜ್ಞಾನ ಜಾಥಾಗಳನ್ನು ಪ್ರಮುಖವಾಗಿ ಹೆಸರಿಸಬಹುದಾಗಿದೆ. ಇವುಗಳಿಗೆ ಸಿಕ್ಕ ಸಕಾರಾತ್ಮಕ ಪ್ರತಿಕ್ರಿಯೆ ಈ ವರ್ಷ ಇಂತಹುದೇ ಕಾರ್ಯಕ್ರಮವನ್ನು ಅಖಿಲಭಾರತದಲ್ಲಿ ಸಂಘಟಿಸುವ ಪ್ರಯತ್ನಕ್ಕೆ ನಾಂದಿ ಹಾಡಿದೆ. ಭಾರತದ ವಿಜ್ಞಾನ ಸಂವಹನಾ ಕ್ಷೇತ್ರದಲ್ಲಿ ಅತ್ಯಂತ ಮಹತ್ವಾಕಾಂಕ್ಷೆಯ ಕಾರ್ಯಕ್ರಮ ವೈಜ್ಞಾನಿಕ ಜಾಗ್ರತಿ ವರ್ಷ-2004 ಆಗಿದೆ.

ಅಖಿಲ ಭಾರತ ಮಟ್ಟದಲ್ಲಿ ಈ ಕಾರ್ಯಕ್ರಮ ಜನವರಿಯಲ್ಲಿ ಚಂಡೀಘಡದಲ್ಲಿ ನಡೆದ ರಾಷ್ಟ್ರೀಯ ವಿಜ್ಞಾನ ಕಾಂಗ್ರೆಸ್ ನಲ್ಲಿ ಪ್ರಧಾನ ಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರಿಂದ ಅಧಿಕೃತವಾಗಿ ಉದ್ಘಾಟನೆಗೊಂಡಿತು. ಅದರ ತರುವಾಯದಲ್ಲೇ ಕರ್ನಾಟಕದಲ್ಲೂ ಸಾಕಷ್ಟು ಸಿದ್ಧತೆಗಳೊಂದಿಗೆ ಈ ಕಾರ್ಯಕ್ರಮದ ಚಟುವಟಿಕೆಗಳು ಆರಂಭಗೊಂಡವು. ಇದೇ ಸಂದರ್ಭದಲ್ಲಿ ಆರಂಭವಾದ ರಾಷ್ಟ್ರವ್ಯಾಪಿ ಚುನಾವಣೆಗಳ ಭರಾಟೆಯ ನಡುವೆಯೂ ಇಂತಹ ಬೃಹತ್ ಕಾರ್ಯಕ್ರಮಗಳಿಗೆ ಚಾಲನೆ ನೀಡುವ ಸಲುವಾಗಿ ರಾಜ್ಯ ಮಟ್ಟದಲ್ಲಿ ಘನತೆವೆತ್ತ ರಾಜ್ಯಪಾಲರಾದ ಸನ್ಮಾನ್ಯ ಶ್ರೀಯುತ ಟಿ.ಎನ್.ಚತುರ್ವೇದಿಯವರ ಮಹಾಪೋಷಕತ್ವದ ಅಡಿಯಲ್ಲಿ ನಾಡಿನ ಪ್ರಖ್ಯಾತ ಶಿಕ್ಷಣ ತಜ್ಞರೂ ವಿಚಾರವಾದಿಗಳೂ ಆದ ಪದ್ಮಭೂಷಣ ಡಾ|| ಎಚ್. ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ಹಾಗೂ ನಾಡಿನ ಹೆಸರಾಂತ ವೈದ್ಯ ವಿಜ್ಞಾನಿಗಳೂ ಆದ ಡಾ||ಎಸ್.ಜೆ. ನಾಗಲೋಟಿಮಠರು ಉಪಾಧ್ಯಕ್ಷರಾಗಿರುವ ಒಂದು ರಾಜ್ಯ ಸಂಘಟನಾ ಸಮಿತಿ ಅಸ್ತಿತ್ವಕ್ಕೆ ಬಂದಿತು. ರಾಜ್ಯದ ಪ್ರಮುಖ ಸ್ವಯಂ ಸೇವಾ ಸಂಘಟನೆಗಳು, ಪರಿಸರ ತಜ್ಞರು, ವಿಜ್ಞಾನಿಗಳು, ಲೇಖಕರು ವಿವಿಧ ಇಲಾಖಾ ಅಧಿಕಾರಿಗಳನ್ನುಳ್ಳ ಈ ಸಮಿತಿ ಕರ್ನಾಟಕದಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಆಶ್ರಯದಲ್ಲಿನ ತುಮಕೂರು ವಿಜ್ಞಾನ ಕೇಂದ್ರ ಹಾಗೂ ಬೆಳಗಾವಿ ವಿಜ್ಞಾನ ಕೇಂದ್ರಗಳ ಮೂಲಕ ಈ ಚಟುವಟಿಕೆಗಳನ್ನು ಹಮ್ಮಿಕೊಂಡಿತು. ಜಿಲ್ಲಾ ಮಟ್ಟದಲ್ಲಿ ಈ ಕಾರ್ಯಕ್ರಮಗಳನ್ನು ಸಂಘಟಿಸಲು ಕರ್ನಾಟಕ ರಾಜ್ಯದಾದ್ಯಂತ ಜನಪ್ರಿಯ ವಿಜ್ಞಾನ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವ ಕ.ರಾ.ವಿ.ಪ. ಘಟಕಗಳು ಸಂಯುಕ್ತವಾಗಿ ಜಿಲ್ಲಾ ಮಟ್ಟದಲ್ಲಿ ವೈಜ್ಞಾನಿಕ ಜಾಗ್ರತಿ ವರ್ಷ-2004 ರ ಜಿಲ್ಲಾ ಸಮಿತಿಗಳನ್ನು ಸಂಘಟಿಸಿವೆ. ಹೀಗೆ ವ್ಯಾಪಕ ಸಂಘಟನಾ ಜಾಲದ ಮೂಲಕ ಈ ವರ್ಷ ಹಲವಾರು ಕಾರ್ಯಕ್ರಮಗಳನ್ನು ಸಂಘಟಿಸಲಾಗುತ್ತಿದೆ.

ಕರ್ನಾಟಕದಲ್ಲಿ ವೈಜ್ಞಾನಿಕ ಜಾಗ್ರತಿ ವರ್ಷ 2004ರ ಕಾರ್ಯಕ್ರಮಗಳು ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಭಾಗವಾಗಿ ಕರ್ನಾಟಕದ ರಾಜಧಾನಿ ಬೆಂಗಳೂರಿನ ಗಾಂಧೀಭವನದಿಂದ ವಿದ್ಯುಕ್ತವಾಗಿ ಆರಂಭಗೊಂಡವು. ರಾಷ್ಟ್ರದ ಪ್ರತಿಭಾನ್ವಿತ ವಿಜ್ಞಾನಿಗಳಾದ ಭಾರತೀಯ ಬಾಹ್ಯಾಕಾಶ ಸಂಶೋಧನ ಸಂಸ್ಥೆಯ ಮಾಜಿ ನಿರ್ದೇಶಕರಾದ ಶ್ರೀ ಯು.ಆರ್.ರಾವ್ ಈ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಪರಿಸರ ವಿಜ್ಞಾನ ಕೇಂದ್ರದ ಹಿರಿಯ ಪರಿಸರ ವಿಜ್ಞಾನಿಗಳಾದ ಪ್ರೊ. ಮಾಧವ್ ಗಾಡ್ಗೀಳ್, ಕ.ರಾ.ವಿ.ಪ.ದ ಗೌರವ ಕಾರ್ಯದರ್ಶಿಗಳಾದ ಡಾ|| ಹೆಚ್.ಎಸ್. ನಿರಂಜನ ಆರಾಧ್ಯ ಈ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಈ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ಪ್ರೊ|| ಎಂ.ಆರ್. ನಾಗರಾಜು, ಶ್ರೀ ಅ.ನ. ಎಲ್ಲಪ್ಪರೆಡ್ಡಿ, ಪ್ರೊ|| ಎಂ.ಆರ್. ಸೋಮೇಶ್ವರ, ಡಾ|| ಪ್ರಕಾಶ್, ಮುಂತಾದವರು ವೈಜ್ಞಾನಿಕ ಜಾಗ್ರತಿ ವರ್ಷ-2004ರ ಪ್ರಮುಖ ವಿಷಯಗಳನ್ನು ಕುರಿತ ಜನಪ್ರಿಯ ಉಪನ್ಯಾಸಗಳನ್ನು ನೀಡಿದರು. ಜಿಲ್ಲೆಯ ಪ್ರಮುಖ ಸಂಘಟನಕಾರರು ಈ ಉದ್ಘಾಟನಾ ಸಮಾವೇಶದಲ್ಲಿ ಪಾಲ್ಗೊಂಡು ಕರ್ನಾಟಕದಲ್ಲಿ ಈ ಕಾರ್ಯಕ್ರಮಕ್ಕೆ ಅಧಿಕೃತ ಚಾಲನೆ ನೀಡಿದರು. ರಾಜ್ಯ ಸಂಚಾಲಕರಾದ ಸಿ.ಯತಿರಾಜು, ಎಸ್.ಬಿ.ಹಳ್ಳಿ ಹಾಗೂ ಎನ್.ಮಹೇಶ್‌ಚಂದ್ರ ವಿವಿಧ ಕಾರ್ಯಕ್ರಮಗಳ ಪರಿಚಯ ಮಾಡಿಕೊಟ್ಟರು.

ಕರ್ನಾಟಕದಲ್ಲಿ ವೈಜ್ಞಾನಿಕ ಜಾಗ್ರತಿ ವರ್ಷ 2004ರ ಕಾರ್ಯಕ್ರಮಗಳನ್ನು 2 ಪ್ರಮುಖ ಹಂತಗಳಲ್ಲಿ ಕೈಗೆತ್ತಿಕೊಳ್ಳಲು ನಿರ್ಧರಿಸಲಾಯಿತು. ರಾಷ್ಟ್ರೀಯ ಸಮಿತಿಯಿಂದ ಸೂಚಿತವಾದ 6 ಪ್ರಮುಖ ವಿಷಯಗಳ ಪೈಕಿ ನೀರು ಮತ್ತು ನೈರ್ಮಲ್ಯ, ಪರಿಸರ ಮತ್ತು ಜೀವ ವೈವಿಧ್ಯತೆಯ ಸಂರಕ್ಷಣೆ, ಪ್ರಾಕೃತಿಕ ವಿಕೋಪಗಳನ್ನು ಕೈಗೆತ್ತಿಕೊಂಡು ಈ ಮೇಲ್ಕಂಡ ವಷಯಗಳ ಬಗ್ಗೆ ಅನೇಕ ಆಕರ್ಷಕ ವೈವಿಧ್ಯಮಯ ಕಾರ್ಯಕ್ರಮಗಳನ್ನು ರೂಪಿಸಲಾಯಿತು. ಇದಲ್ಲದೆ ವೈಜ್ಞಾನಿಕ ಜಾಗ್ರತಿ ವರ್ಷ 2004ರ ಅಂಗವಾಗಿ ಕೆಲವು ಜಿಲ್ಲೆಗಳಲ್ಲಿ ಬೇಸಿಗೆ ವಿಜ್ಞಾನ ಶಿಬಿರವನ್ನು ನಡೆಸುವುದು ಒಂದು ಕಾರ್ಯಕ್ರಮವಾಗಿತ್ತು. ಮೊದಲ ಹಂತದ ಕಾರ್ಯಕ್ರಮಗಳನ್ನು ಮೇ 2004ರಿಂದ ಸೆಪ್ಟೆಂಬರ್ 2004ರವರೆಗೆ ಸಂಘಟಿಸಲು ತೀರ್ಮಾನಿಸಲಾಯಿತು. 2ನೇ ಹಂತದ ಕಾರ್ಯಕ್ರಮಗಳನ್ನು ಆರೋಗ್ಯ ಮತ್ತು ಪೌಷ್ಟಿಕತೆ, ಮಣ್ಣಿನ ನಿರ್ವಹಣೆ, ಮಾಹಿತಿ ತಂತ್ರಜ್ಞಾನದ ಮೂಲಕ ಜನತೆಯ ಸಬಲೀಕರಣ, ವೈಜ್ಞಾನಿಕ ಮನೋಭಾವ, ವಿಜ್ಞಾನ ಶಿಕ್ಷಣ ಮುಂತಾದ ವಿಷಯಗಳ ಬಗ್ಗೆ ರೂಪಿಸಲು ತೀರ್ಮಾನಿಸಲಾಯಿತು.

ಹೀಗೆ ರೂಪಿಸಲ್ಪಟ್ಟ ಕಾರ್ಯಕ್ರಮಗಳ ಕರಡಿನ ಮೇಲೆ ಮೇ 2004ರಲ್ಲಿ ನಡೆದ 2 ದಿನಗಳ ಜಿಲ್ಲಾ ಸಂಚಾಲಕರ ಸಮಾಲೋಚನೆಯ ಕಾರ್ಯಾಗಾರದಲ್ಲಿ ಅವುಗಳನ್ನು ಅಂತಿಮ ಗೊಳಿಸಲಾಯಿತು. ಈ ರೀತಿ ರೂಪಿಸಲ್ಪಟ್ಟ ಮೊದಲ ಹಂತದ ಕಾರ್ಯಕ್ರಮಗಳು ಈ ಕೆಳಗಿನಂತಿವೆ.

1. ಪರಿಸರ ಮತ್ತು ಜೀವ ವೈವಿಧ್ಯ ಸಂರಕ್ಷಣೆ : ಜಿಲ್ಲಾ ಮಟ್ಟದಲ್ಲಿ ವಿಶ್ವ ಪರಿಸರ ದಿನಾಚರಣೆ. ವಿವಿಧ ಪರಿಸರ ಸ್ಪರ್ಧೆಗಳು, ನಿಸರ್ಗ ಚಾರಣ, ಉಪನ್ಯಾಸಗಳು, ರ್‍ಯಾಲಿಗಳು, ಕೆರೆ ಅರಣ್ಯ ಪ್ರದೇಶಗಳ ಸಾಂಕೇತಿಕ ಅಧ್ಯಯನಗಳು. ಇದಕ್ಕೆ ಪೂರಕವಾಗಿ : "ವಂಶವಾಹಿ ರೂಪಾಂತರಿತ ತಳಿಗಳು ವರವೇ, ಶಾಪವೇ?" ಎಂಬ ವಿಷಯದ ಬಗ್ಗೆ ಸಾರ್ವಜನಿಕ ಚರ್ಚೆ, ಪಕ್ಷಿ ವೀಕ್ಷಣೆ ಹಾಗೂ ನಿಸರ್ಗಚಾರಣ ಹವ್ಯಾಸಗಳನ್ನು ಪರಿಚಯಿಸುವ ಕಾರ್ಯಕ್ರಮಗಳನ್ನು ರೂಪಿಸಲಾಗಿತ್ತು.
2. ನೀರು ಮತ್ತು ನೈರ್ಮಲ್ಯದ ಬಗ್ಗೆ ಉಪನ್ಯಾಸ, ಯೋಜನಾ ಅಧ್ಯಯನ, ಮಳೆ ನೀರಿನ ಸುಗ್ಗಿಯ ಅಗತ್ಯ ಮತ್ತು ಅದನ್ನು ವಿವಿಧ ಪ್ರದೇಶಗಳಲ್ಲಿ ಅಳವಡಿಸುವ ಬಗ್ಗೆ ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆಗಳು.
3. ಮಾನವ ನಿರ್ಮಿತ ಮತ್ತು ನೈಸರ್ಗಿಕ ವಿನಾಶಗಳ ಬಗೆಗಿನ ಸಿದ್ಧತೆಗಳ ಬಗ್ಗೆ ಉಪನ್ಯಾಸ ಮತ್ತು ಚರ್ಚೆ. ಕರ್ನಾಟಕವನ್ನು ಬಾಧಿಸುವ ಬರ, ಅಂತರ್ಜಲ ಮಟ್ಟದ ಕುಸಿತ, ನೀರಾವರಿ ಸಮಸ್ಯೆ, ಭೂಕಂಪ ಮತ್ತು ಪ್ರವಾಹಗಳ ಬಗ್ಗೆ ನಾವು ತೆಗೆದುಕೊಳ್ಳಬೇಕದ ಮುನ್ನೆಚ್ಚರಿಕೆ ಹಾಗೂ ಅವುಗಳ ತೀವ್ರ ಪರಿಣಾಮಗಳನ್ನು ಮಿತ ಗೊಳಿಸಲು ನಾವು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳು.
4. ಮೊದಲ ಹಂತದಲ್ಲಿ ಕೆಲವು ಜಿಲ್ಲೆಗಳಲ್ಲಿ ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯದ ಸಂಚಾರಿ ವಸ್ತು ಪ್ರದರ್ಶನವನ್ನೂ ಜಾಥಾ ಸ್ವರೂಪದಲ್ಲಿ ಸಂಘಟಿಸಲು ತೀರ್ಮಾನಿಸಲಾಯಿತು. ಇದು ರಾಷ್ಟ್ರವ್ಯಾಪಿ ವಿಜ್ಞಾನ ರೈಲಿನ ಮುಂದುವರಿದ ಕಿರು ಪ್ರದರ್ಶನವಾಗಿತ್ತು. "ಮಾನವ ಮತ್ತು ಬಾಹ್ಯಾಕಾಶ" ಎಂಬ ಶೀರ್ಷಿಕೆಯ ಈ ಪ್ರದರ್ಶನವನ್ನು ಈ ವರ್ಷದಾದ್ಯಂತ ವ್ಯಾಪಕವಾಗಿ ಪ್ರದರ್ಶಿಸಲು ತೀರ್ಮಾನಿಸಲಾಯಿತು.

ಹೀಗೆ ಅಂತಿಮಗೊಳಿಸಲ್ಪಟ್ಟ ಪ್ರಥಮ ಹಂತದ ಚಟುವಟಿಕೆಗಳನ್ನು ಸಂಘಟಿಸಲು ಜಿಲ್ಲಾ ಸಂಚಾಲಕರುಗಳಿಗೆ ಮೇ ತಿಂಗಳ ಮಧ್ಯಭಾಗದಲ್ಲಿ ತರಬೇತಿ ಕಾರ್ಯಾಗಾರವನ್ನು ನಡೆಸಲಾಯಿತು.

ಪ್ರಥಮ ಹಂತದ ಕಾರ್ಯಕ್ರಮಗಳ ಬಗ್ಗೆ ಜಿಲ್ಲಾ ಮಟ್ಟದ ಸಂಪನ್ಮೂಲ ವ್ಯಕ್ತಿಗಳಿಗೆ ಬೆಂಗಳೂರಿನ DSERT ನಲ್ಲಿ ದಿನಾಂಕ 29 ಮತ್ತು 30ರಂದು ತರಬೇತಿ ನೀಡಲಾಯಿತು. ಈ ಶಿಬಿರವನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರಾದ ಶ್ರೀ ಎಂ.ಆರ್.ಪಟೇಲ ಅವರು ಉದ್ಘಾಟಿಸಿದರು. DSERTಯ ನಿರ್ದೇಶಕರಾದ ಶ್ರೀ ಡಿ. ಜಗನ್ನಾಥರಾವ್ ಮುಖ್ಯ ಅತಿಥಿಗಳಾಗಿದ್ದರು. ಪರಿಸರ ಮತ್ತು ಜೀವಿ ವೈವಿಧ್ಯದ ಸಂರಕ್ಷಣೆ ಬಗ್ಗೆ ಡಾ|| ಹೆಚ್.ಎಸ್.ನಿರಂಜನಾರಾಧ್ಯ, ವಂಶವಾಹಿ ರೂಪಾಂತರಿ ತಳಿಗಳ ಬಗ್ಗೆ ಡಾ|| ಲೀಲಾ ಹಾಗೂ ಅ.ನ. ಎಲ್ಲಪ್ಪ ರೆಡ್ಡಿ ನಿಸರ್ಗಚಾರಣ, ಕಾಡು, ಕೆರೆ ಜೀವ ವೈವಿಧ್ಯತೆಯ ಅಧ್ಯಯನದ ಬಗ್ಗೆ ಶ್ರೀಮತಿ ಎನ್. ಇಂದಿರಮ್ಮ, ಶ್ರೀ ರಾಮಕೃಷ್ಣಪ್ಪ, ಪಕ್ಷಿ ವೀಕ್ಷಣೆಯ ಬಗ್ಗೆ ಶ್ರೀಧರ್ ತರಬೇತಿ ನೀಡಿದರು. ಮಳೆ ನೀರಿನ ಸಂಗ್ರಹಣೆ, ಪ್ರಾಮುಖ್ಯತೆ, ಪ್ರಾತ್ಯಕ್ಷಿಕೆ ಬಗ್ಗೆ ಶ್ರೀ ಅಯ್ಯಪ್ಪ ಮಸಗಿ, ನೈಸರ್ಗಿಕ ಮತ್ತು ಮಾನವ ನಿರ್ಮಿತ ವಿಕೋಪಗಳ ಬಗ್ಗೆ ಬರ ಪರಿಹಾರ ಉಸ್ತುವಾರಿ ಕೋಶದ ತಜ್ಞರಾದ ಶ್ರೀ ಪ್ರಕಾಶ್ ತರಬೇತಿ ನೀಡಿದರು. ವೈಜ್ಞಾನಿಕ ಜಾಗ್ರತಿ ವರ್ಷ 2004ರ ಉದ್ದೇಶ ಮತ್ತು ಕಾರ್ಯಕ್ರಮಗಳ ಸ್ವರೂಪ, ವ್ಯಾಪ್ತಿಗಳನ್ನು ರಾಜ್ಯ ಸಂಚಾಲಕ ಶ್ರೀ ಸಿ. ಯತಿರಾಜು ಪರಿಚಯಿಸಿದರು.

ಈ ಎಲ್ಲಾ ಕಾರ್ಯಕ್ರಮಗಳಿಗೆ ಪೂರಕವಾಗಿ ಅಗತ್ಯ, ಸಾಹಿತ್ಯವನ್ನು ಸಿದ್ಧಪಡಿಸಲು ತಜ್ಞ ಸಮಿತಿ ಕೆಲಸ ಮಾಡುತ್ತಿದೆ. ಪಕ್ಷಿಗಳ ಬಗ್ಗೆ, ಮಳೆ ನೀರಿನ ಸುಗ್ಗಿಯ ಬಗ್ಗೆ ಸ್ಲೈಡ್‌ಗಳನ್ನು ತಯಾರಿಸಿ ಜಿಲ್ಲಾ ಸಮಿತಿಗೆ ಒದಗಿಸಲಾಗಿದೆ. ಜೀವ ವೈವಿಧ್ಯತೆ, ಕೆರೆ ಒಂದು ಅಧ್ಯಯನ, ಭಾರತ ತಳಿ ಭೂಮಿಗಳು, ಪಕ್ಷಿ ವೀಕ್ಷಣೆ ಮಾರ್ಗದರ್ಶಿ ಎಂಬ ಪೂರಕ ಸಾಹಿತ್ಯಗಳನ್ನೊದಗಿಸಲಾಗಿದೆ. ಕೇಂದ್ರ ಸಮಿತಿ ಒದಗಿಸುವ ವಿಜ್ಞಾನ ಸಾಹಿತ್ಯ ಪ್ರಕಟಣೆಗಳನ್ನು ಕನ್ನಡೀಕರಿಸುವ ಕೆಲಸ ಮತ್ತು ಕೆಲವು ಹೊಸ ಪ್ರಕಟಣೆಗಳನ್ನು ತರುವ ಕೆಲಸವೂ ಸಹ ಭರದಿಂದ ಸಾಗಿದೆ.

## ಕೊಡಗು ಜಿಲ್ಲೆ

ಕೊಡಗು ಜಿಲ್ಲೆಯಲ್ಲಿ ವೈಜ್ಞಾನಿಕ ಜಾಗ್ರತಿ ವರ್ಷ 2004ರ ಅಂಗವಾಗಿ ಸಂಚಾರಿ ವಿಜ್ಞಾನ ವಸ್ತು ಪ್ರದರ್ಶನವು ನಡೆದ ಸ್ಥಳಗಳು. ಸಾ.ಶಿ.ಇ.ಯ ಉಪನಿರ್ದೇಶಕರಾದ ಜಗದೀಶ್ ಅವರು ಉದ್ಘಾಟಿಸಿದರು.

1. 15-7-04 : ಕುಶಾಲನಗರ
2. 16-7-04 : ಬಸವನಹಳ್ಳಿ
3. 16-7-04 : ಕೂಡಗಿ
4. 17-7-04 : ಸೋಮವಾರಪೇಟೆ
5. 18-7-04 : ಗೋಣಿಮಾರೂರು, ಆಲೂರು, ಸಿದ್ದಾಪುರ, ಮಸನೂರು
6. 19-7-04 : ಐಗೂರು
7. 20-7-04 : ಸುಂಟಿಕೊಪ್ಪ
8. 21-7-04 : ಮಡಿಕೇರಿ
9. 22-7-04 : ಮೂರ್ನಾಡು
10. 23-7-04 : ವಿರಾಜಪೇಟೆ
11. 24-7-04 : ಗೋಣಿಕೊಪ್ಪ

## ಕೊಪ್ಪಳ ಜಿಲ್ಲೆ





ಕೊಪ್ಪಳ ಜಿಲ್ಲೆಯಲ್ಲಿ 29-6-2004ರಂದು ವೈಜ್ಞಾನಿಕ ಜಾಗ್ರತಿ ವರ್ಷ 2004ರ ಉದ್ಘಾಟನೆಯನ್ನು ಜಿಲ್ಲಯ ಪಂಚಾಯಿತಿ ಅಧ್ಯಕ್ಷರಾದ ಶ್ರೀ ಹೆಚ್.ಎಲ್.ಹಿರೇಗೌಡ ಅವರು ನೆರವೇರಿಸಿದರು.

ಸಸಿನೆಡುವ ಕಾರ್ಯಕ್ರಮವನ್ನು ಗವಿ ಸಿದ್ದೇಶ್ವರ ಮಹಾವಿದ್ಯಾಲಯದಲ್ಲಿ ನಡೆಸಲಾಯಿತು. ಅಂದು ನಡೆದ ವೈಜ್ಞಾನಿಕ ಜಾಗ್ರತಿ ವರ್ಷ 2004ರ ಅಂಗವಾಗಿ ನಡೆದ ಇತರ ಕಾರ್ಯಕ್ರಮಗಳು :

1. ಪರಿಸರ ಜಾಥಾದಲ್ಲಿ 450 ಮಕ್ಕಳು ಭಾಗವಹಿಸಿದ್ದರು.
2. 4 ಜಿಲ್ಲೆಗಳಲ್ಲಿ 'ಜೈವಿಕ ವಿಜ್ಞಾನ ವರವೋ, ಶಾಪವೋ' ಕಾರ್ಯಕ್ರಮ ನಡೆಯಿತು.
3. 17-7-2004ರಂದು ಪ್ರಾಥಮಿಕ ಶಾಲಾ ಮತ್ತು ಪ್ರೌಢಶಾಲಾ ಶಿಕ್ಷಕರ ಚರ್ಚಾ ಕೂಟ.
4. 18-8-2004ಂದು ಜೈವಿಕ ವಿಜ್ಞಾನದ ಬಗೆಗೆ ಶಾಲಾ ವಿದ್ಯಾರ್ಥಿಗಳಿಗೆ ಚರ್ಚಾ ಕೂಟ ನಡೆಯಿತು.
5. 1-9-2004ರಂದು ಜೈವಿಕ ತಂತ್ರವಿಜ್ಞಾನ ಉಪನ್ಯಾಸ ಹಾಗೂ ಸ್ಪರ್ಧೆ.
6. 2-9-2004ರಂದು ಸೀಡೀ ಮೂಲಕ ಪಕ್ಷಿ ವೀಕ್ಷಣೆ ಉಪನ್ಯಾಸ ಕಾರ್ಯಕ್ರಮ.
7. 23-9-2004ರಂದು ಆರಂಭವಾಗಿ ಸಂಚಾರಿ ವಿಜ್ಞಾನ ಪ್ರದರ್ಶನವನ್ನು ಕೊಪ್ಪಳ, ಹುಲಗಿ, ಹಿಟ್ನಾಳ, ಗಂಗಾವತಿ, ಹಿರೇಸಿಂಧೊಗಿ, ಯಲಬುರ್ಗಿ, ಕುಕನೂರ, ಕುಷ್ಟಗಿ ಈ ಊರುಗಳಲ್ಲಿ 25000ಕ್ಕೂ ಹೆಚ್ಚು ವಿದ್ಯಾರ್ಥಿಗಳು ವೀಕ್ಷಿಸಿದರು.

## ಕೋಲಾರ ಜಿಲ್ಲೆ

1. ಜೂನ್ 2004 ಶುಕ್ರ ಸಂಕ್ರಮಣ ಕಾರ್ಯಕ್ರಮ ನಡೆಯಿತು.

2. ಪವಾಡ ರಹಸ್ಯ ಬಯಲು ಕಾರ್ಯಕ್ರಮ ನಡೆಯಿತು.
3. ಖಗೋಳ ವಿಸ್ಮಯಗಳು -ಸ್ಲೈಡ್ ಕಾರ್ಯಕ್ರಮ ನಡೆಯಿತು.
4. 20-7-2004ರಂದು ಶಿಕ್ಷಕರಿಗೆ ಜಲಜಾಗೃತಿ ಶಿಬಿರ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.
5. 23-7-2004ರಂದು ನೀರು ಜೀವನ ಸಂಜೀವಿನಿ ವಿಷಯವಾಗಿ ಪ್ರಬಂಧ ಸ್ಪರ್ಧೆ ನಡೆಯಿತು.
6. 6-8-2004ರಂದು ಏಡ್ಸ್ ಜಾಗ್ರತಿ ಅಧಿವೇಶನವು ನಡೆಯಿತು.
7. 16-8-2004ರಂದು ಜನರೆಡೆಗೆ ವಿಜ್ಞಾನ ಜಾಥಾ ಎಂಬ ಕಾರ್ಯಕ್ರಮವು ರಾಜ್ಯ ಮಟ್ಟದ ಜಾಥಾ ಗುಡಿಬಂಡೆ ತಾಲ್ಲೂಕು ಪ್ರವೇಶಿಸಿದ ಸಂದರ್ಭದಲ್ಲಿ ನಡೆಯಿತು. ಜನಪ್ರಿಯ ವಿಜ್ಞಾನ ಉಪನ್ಯಾಸ, ಪವಾಡ ರಹಸ್ಯ ಬಯಲು, ಕಲಾ ಜಾಥಾ ಮುಂತಾದ ಕಾರ್ಯಕ್ರಮಗಳು ನಡೆದುವು.
8. 23-8-2004 - ವಿಜ್ಞಾನ ವಿಷಯಗಳ ಭಾಷಣ ಮತ್ತು ಪ್ರಬಂಧ ಸ್ಪರ್ಧೆ ಜಿಲ್ಲೆಯ ಮಟ್ಟದಲ್ಲಿ ನಡೆಯಿತು.

## ಗದಗ್ ಜಿಲ್ಲೆ





ಗದಗ್ ಜಿಲ್ಲೆಯಲ್ಲಿ ವೈಜ್ಞಾನಿಕ ಜಾಗ್ರತಿ ವರ್ಷ-2004ರ ಉದ್ಘಾಟನೆ 28-7-2004ರಂದು ನಡೆಯಿತು. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಾಹಕ ಶ್ರೀ ಎಸ್. ಬಿ. ದ್ಯಾಬೇರಿ ಉದ್ಘಾಟನೆ ನಡೆಸಿದರು. ಜಿಲ್ಲಾಧಿಕಾರಿ ಹೆಚ್. ಎಂ. ಧನಂಜಯ ಅಧ್ಯಕ್ಷತೆ ವಹಿಸಿದ್ದರು.

1. ಅಂದಿನ ಕಾರ್ಯಕ್ರಮಗಳು ಹೀಗಿದ್ದುವು:
   ಅ. ಉದ್ಘಾಟನಾ ಸಮಾರಂಭ
   ಆ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ವಿದ್ಯಾರ್ಥಿಗಳಿಂದ ಜಾಥಾ
   ಇ. 60 ಮಂದಿ ಶಿಕ್ಷಕರಿಗೆ ಕಾರ್ಯಕ್ರಮದ ಬಗೆಗಿನ ತರಬೇತಿ.
   ಈ. ವಿಶ್ವ ಪರಿಸರ ದಿನಾಚರಣೆ
   ಉ. ಕ್ವಿಜ್ ಕಾರ್ಯಕ್ರಮ
2. 6-8-2004ರಂದು ಗದಗ್ ಸಮೀಪದ ಘಟಕದ ಚಟುವಟಿಕೆಗಳು ಹಾಗೂ ವೈಜ್ಞಾನಿಕ ಜಾಗ್ರತಿ ವರ್ಷ 2004ರ ಉದ್ಘಾಟನಾ ಕಾರ್ಯಕ್ರಮ ನಡೆದುವು. ಇದನ್ನು ನಡೆಸಿಕೊಟ್ಟವರು ಕರಾವಿಪದ ಅಧ್ಯಕ್ಷರಾದ ಡಾ॥ಎಸ್.ಜೆ.ನಾಗಲೋಟಿಮಠ ಅವರು - "ಆಹಾರ ಮತ್ತು ಆರೋಗ್ಯ"ದ ಬಗೆಗೆ ಅವರು ಮಾತನಾಡಿದರು. ಅನಂತರ ವಿದ್ಯಾರ್ಥಿಗಳೊನೆ ಸಂವಾದ ಕಾರ್ಯಕ್ರಮವಿದ್ದಿತು.
3. 8-9-2004ರಂದು ಸಂಪನ್ಮೂಲ ವ್ಯಕ್ತಿಗಳಿಗೆ ಮುಂಡರಗಿ ತಾಲ್ಲೂಕು ಮಟ್ಟದ ತರಬೇತಿ ಶಿಬಿರವು ನಡೆಯಿತು.
4. 10-9-2004ರಂದು ವೈಜ್ಞಾನಿಕ ಜಾಗ್ರತಿ ವರ್ಷದ ಅಂಗವಾಗಿ ರೋಹಿಣಿ ವಿಜ್ಞಾನ ಸಂಘದ ಪುನರಾರಂಭೋತ್ಸವವು ನಡೆಯಿತು. ಇದರಲ್ಲಿ ರಸ ಪ್ರಶ್ನೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು.
5. 20-9-2004ರಂದು ಜೈವಿಕ ತಂತ್ರಜ್ಞಾನ ಎಂಬ ವಿಷಯವಾಗಿ ಸಾರ್ವಜನಿಕ ಚರ್ಚೆಯು ನಡೆಯಿತು.

# ಗುಲ್ಬರ್ಗ ಜಿಲ್ಲೆ





ಗುಲ್ಬರ್ಗ ಜಿಲ್ಲೆಯಲ್ಲಿ ವೈಜ್ಞಾನಿಕ ಜಾಗ್ರತಿ ವರ್ಷ 2004ರ ಪರವಾಗಿ 5-6-2004ರಿಂದ 22-12-2004ರವರೆಗೆ 26 ಕಾರ್ಯಕ್ರಮಗಳ ವಿಷಯ, ಕಾರ್ಯಕ್ರಮ ನಡೆಯುವ ಸ್ಥಳಗಳಲ್ಲಿ ನಿರ್ಧರಿಸಿ ಕ್ಯಾಲೆಂಡರ್ ತಯಾರಿಸಲಾಯಿತು.

ಗುಲ್ಬರ್ಗ ಜಿಲ್ಲಾಧಿಕಾರಿಗಳ ವತಿಯಿಂದ ಅಲ್ಲಿನ ಸಿಟಿ ಚಾನೆಲ್‌ನಲ್ಲಿ ಈ ಕೆಳಕಂಡ ಘೋಷಣೆಗಳನ್ನು ಪ್ರಸಾರ ಮಾಡುವ ವ್ಯವಸ್ಥೆ ಮಾಡಲಾಯಿತು.

1. ಪ್ರತಿಯೊಂದು ನೀರಿನ ಹನಿಯೂ ಅಮೂಲ್ಯವಾದದ್ದು, ಅದನ್ನು ವ್ಯರ್ಥವಾಗಿ ಪೋಲು ಮಾಡಬೇಡಿ.
2. ಮಳೆ ನೀರಿನ ಕೊಯ್ಲು ಮಾಡಿ, ಜಲ ಸಂರಕ್ಷಿಸಿ - ಮುಂದೆ ಬರಲಿರುವ ಜಲಕ್ಷಾಮ ತಡೆಯಿರಿ.
3. ನಿಮ್ಮ ಮನೆಯ / ಹೊಲದ ಬೋರ್‌ವೆಲ್‌ಗಳನ್ನು ಮರುಪಯೋಗಗೊಳಿಸಿ, ಪುನಶ್ಚೇತನಗೊಳಿಸಿ.
4. 20 ಮೈಕ್ರಾನಿಗಿಂತ ತೆಳ್ಳಗಿನ, ಬಣ್ಣವಿರುವ ಪ್ಲಾಸ್ಟಿಕ್ ಚೀಲ ಬಳಸಬೇಡಿ.
5. ವೈಜ್ಞಾನಿಕವಾಗಿ ಸಾಕ್ಷರರಾಗುವುದು ಬಹು ಮುಖ್ಯ.
6. ವೈಜ್ಞಾನಿಕ ಮನೋಭಾವ - ದೃಷ್ಟಿಕೋನ ಬೆಳೆಸಿಕೊಂಡು ಅಂಧ ವಿಶ್ವಾಸದಿಂದ ದೂರವಿರಿ.
7. ಗೃಹ ತ್ಯಾಜ್ಯ ವಸ್ತುಗಳನ್ನು ಸಾವಯವ ಗೊಬ್ಬರ ಮಾಡಿ ಮನೆಯಲ್ಲಿ ಗಿಡ ಬೆಳೆಸಿ
8. ಮನೆಗೊಂದು ಗಿಡ, ಊರಿಗೊಂದು ವನ.
9. ಮಳೆಗಾಗಿ ವರುಣ ದೇವನ್ನು ಪೂಜಿಸುವ ಬದಲು ಗಿಡ, ಮರ ಬೆಳೆಸಿ.
10. ಅಳಿದು ಹೋಗುತ್ತಿರುವ ಪ್ರಾಣಿ-ಸಸ್ಯ ಸಂಪತ್ತು ರಕ್ಷಿಸಿ, ಜೀವಿ ವೈವಿಧ್ಯತೆ ಸಂರಕ್ಷಿಸಿ.

5-6-2004 ರಿಂದ 9-7-2004ರವರೆಗೆ 23 ಶಾಲೆಗಳಲ್ಲಿ ಸಂಚಾರಿ ವಿಜ್ಞಾನ ವಸ್ತು ಪ್ರದರ್ಶನವನ್ನು ಪೂರ್ಣಗೊಳಿಸಲಾಯಿತು. ಇದು ಜಿಲ್ಲೆಯಾದ್ಯಂತ ಮುಂದುವರಿಯಿತು.

ಜಿಲ್ಲೆಯಲ್ಲಿ ಜೂನ್, ಜುಲೈ, ಆಗಸ್ಟ್‌ನಲ್ಲಿ ನಡೆದಿರುವ ವೈಜ್ಞಾನಿಕ ಜಾಗ್ರತಿ ವರ್ಷ-2004ರ ಕಾರ್ಯಕ್ರಮಗಳು ಇಂತಿವೆ.

1. ವೈಜ್ಞಾನಿಕ ಜಾಗ್ರತಿ ವರ್ಷದ ಉದ್ಘಾಟನೆ : 5-6-2004.
   ಅ. ಬೆಳಿಗ್ಗೆ 8.45ಕ್ಕೆ ವೈಜ್ಞಾನಿಕ ಜಾಗ್ರತಿ ವರ್ಷದ ಜಾಥಾದ ಉದ್ಘಾಟನೆಯನ್ನು ಸಾರ್ವಜನಿಕ ಇಲಾಖೆಯ ಶ್ರೀ ಬಸವಣ್ಣ ಮಹಾಂತ ಗೌಡರು ನೆರವೇರಿಸಿಕೊಟ್ಟು ಜಾಥಾದಲ್ಲಿ ಪ್ರೌಢ ಶಾಲೆ, ಕಾಲೇಜು ಶಿಕ್ಷಕರು, ವಿದ್ಯಾರ್ಥಿಗಳು, ವಿಜ್ಞಾನಾಸಕ್ತರು ನೂರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದರು.
   ಆ. ಪರಿಸರ ಪ್ರಜ್ಞೆ - ಶ್ರೀ ರಂಜನ್ ದರ್ಗಾ ಅವರಿಂದ ಉಪನ್ಯಾಸ.
   ಇ. ಮಧ್ಯಾಹ್ನ ಉದ್ಘಾಟನಾ ಭಾಷಣ.

ಈ. ಪರಿಸರ ಮತ್ತು ಜೀವಿ ವೈವಿಧ್ಯತೆ ಕುರಿತು ಚಿತ್ರಕಲೆ ಹಾಗೂ ಸ್ಪರ್ಧೆ.

2. 8-6-2004, ಶುಕ್ರ ಸಂಕ್ರಮಣ ವೀಕ್ಷಣೆ - ಸಾವಿರಾರು ವಿದ್ಯಾರ್ಥಿಗಳು, ಸಾರ್ವಜನಿಕರು, ವೀಕ್ಷಿಸಿದರು. ಜಿಲ್ಲೆಯಾದ್ಯಂತ ಈ ಕಾರ್ಯಕ್ರಮ ನಡೆಯಿತು.

   ಅ. ಮಧ್ಯಾಹ್ನ ಸಂವಾದ ಕಾರ್ಯಕ್ರಮ. ಶುಕ್ರ ಸಂಕ್ರಮಣ ಮತ್ತು ಮೂಢ ನಂಬಿಕೆಗಳ ಕುರಿತು ಉಪನ್ಯಾಸ.

3. 10-6-2004 ರಿಂದ 9-7-2004 ಸಂಚಾರಿ ವಿಜ್ಞಾನ ವಸ್ತು ಪ್ರದರ್ಶನ.
4. 1-7-2004 ಪ್ರಕೃತಿ ವಿಕೋಪದ ಬಗೆಗೆ ಕಾಲೇಜು ವಿದ್ಯಾರ್ಥಿಗಳಿಗೆ ಕಾರ್ಯಕ್ರಮ.
5. 5-7-2004 ವನಮಹೋತ್ಸವ ಅಂಗವಾಗಿ ಕಾಲೇಜು ವಿದ್ಯಾರ್ಥಿಗಳಿಗೆ ಕಾರ್ಯಕ್ರಮ.
6. ಸಮುದ್ರಗಳು, ಸಾಗರಗಳ ಬಗೆಗೆ 5-7-2004 ಮತ್ತು 6-7-2004ರಂದು ಕಾರ್ಯಕ್ರಮಗಳು ನಡೆದುವು.
7. 6-7-2004 - ವೈದ್ಯರ ದಿನಾಚರಣೆ. ಸಾರ್ವಜನಿಕ ಆರೋಗ್ಯ ವಿಷಯದಲ್ಲಿ ವೈದ್ಯರ ಪಾತ್ರ, ನೀರಿನ ಮೂಲಕ ಬರುವ ರೋಗಗಳ ನಿವಾರಣೆಯಲ್ಲಿ ವೈದ್ಯರ ಪಾತ್ರ - ಕಾರ್ಯಕ್ರಮಗಳು.
8. 10-7-2004: ಮಳೆ ನೀರಿನ ಕೊಯ್ಲು ಬಗೆಗೆ ಕಮ್ಮಟ. ಗುಲ್ಬರ್ಗದಲ್ಲಿ ಶಾಸಕರು ಶ್ರೀ ಶಶಿ ನಮೋಶಿ ಅವರು ಉದ್ಘಾಟಿಸಿದರು.
9. 12-7-2004 ರಿಂದ 17-7-2004 : ಈ ದಿನಗಳಲ್ಲಿ ಜಾಗತಿಕ ಜನ ಸಂಖ್ಯಾ ದಿನಾಚರಣೆಯ ಅಂಗವಾಗಿ ಜಿಲ್ಲೆಯ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಕಾರ್ಯಕ್ರಮಗಳನ್ನು ನಡೆಸಲಾಯಿತು.
10. 13-7-2004 : ಜಲ ಸಂರಕ್ಷಣೆ - ಇಂದಿನ ತುರ್ತು ಅವಶ್ಯಕತೆ ಬಗೆಗೆ ಕಾಲೇಜು ವಿದ್ಯಾರ್ಥಿಗಳಿಗೆ ಕಾರ್ಯಕ್ರಮ. ಹಲವು ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸ ಮತ್ತು ಚರ್ಚೆ.
11. 15-7-2004ರಂದು ಭಾರತೀಯ ವಿಜ್ಞಾನಿಯ ಬಗೆಗೆ ಸ್ಪರ್ಧೆ. 23 ಶಾಲೆಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.
12. 16-7-2004ರಂದು 'ಪರಿಸರ ವಿಜ್ಞಾನ ಮತ್ತು ಪರಿಸರ' - ಪ್ರೌಢ ಶಾಲಾ ವಿದ್ಯಾರ್ಥಿಗಳಿಗಾಗಿ.
13. 17-7-2004 'ಜೈವಿಕ ತಂತ್ರಜ್ಞಾನ ವರವೋ, ಶಾಪವೋ', ಉಪನ್ಯಾಸ ಮತ್ತು ಚರ್ಚೆ. ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಭಾಗವಹಿಸಿದ್ದರು.
14. 19-7-2004 : ಪ್ರಕೃತಿಯ ಜಾಡು, ಈ ಬಗೆಗೆ ಕಾರ್ಯಕ್ರಮ.

   ಅ. ಊರಿನ ಪ್ರಮುಖ ಬೀದಿಗಳಲ್ಲಿ ನಡೆದ ಮೆರವಣಿಗೆಯಲ್ಲಿ ಗ್ರಾಮ ಪಂಚಾಯಿತಿ ಸದಸ್ಯರು, ವಿದ್ಯಾರ್ಥಿಗಳು, ಶಿಕ್ಷಕರು, ಸಾರ್ವಜನಿಕರು ಭಾಗವಹಿಸಿದ್ದರು.

   ಆ. ಪ್ರಕೃತಿ ಅಂಗವಾಗಿ ಜೀವಿ ವೈವಿಧ್ಯ ಪರಿಚಯಿಸಲು ಊರಿನಲ್ಲಿ ಪರ್ಯಟನೆ; ಗಿಡಮರಗಳನ್ನು ಗುರುತಿಸಲಾಯಿತು.

   ಇ. ಪರಿಸರ ಪ್ರಜ್ಞೆ ಬಗೆಗೆ ಉಪನ್ಯಾಸ.

   ಈ. 'ಮಹಿಳೆ ಮತ್ತು ಪೌಷ್ಟಿಕತೆ' ಮತ್ತು 'ಶಿಶು ಆಹಾರ'ಗಳ ಬಗೆಗೆ ಉಪನ್ಯಾಸಗಳು.

15. 7-7-2004 : 'ಆರೋಗ್ಯ ಮತ್ತು ನೀರು' ಬಗೆಗೆ ಕಾರ್ಯಕ್ರಮ.
16. 27-7-2004 : 'ಮಳೆನೀರು ಕುಯ್ಲು' 'ನೀರು-ಜೀವ ಸಂಜೀವಿನಿ' ಕಾರ್ಯಕ್ರಮ.
17. 28-7-2004 : 'ಜಾಗತಿಕ ಜನಸಂಖ್ಯಾ ದಿನಾಚರಣೆಯ ಮಹತ್ವ' ಕಾರ್ಯಕ್ರಮ.
18. 29-7-2004 : 'ಜನಸಂಖ್ಯಾ ಸ್ಫೋಟ ನಿಯಂತ್ರಣ' ಕಾರ್ಯಕ್ರಮ.
19. 28-7-2004 : 'ಬೈಜಿಕ ವಿದ್ಯುತ್ತು - ವರವೋ, ಶಾಪವೋ', ಸ್ಪರ್ಧೆ ಕಾರ್ಯಕ್ರಮ.
20. 1-8-2004 : ಕುರಿಕೋಟ ಗ್ರಾಮದ ಶಾಲೆಯಲ್ಲಿ ಉಪನ್ಯಾಸ ಹಾಗೂ ಪ್ರಬಂಧ ಸ್ಪರ್ಧೆ ಮತ್ತು ಕ್ವಿಜ್ ಕಾರ್ಯಕ್ರಮಗಳು. ವಿಷಯಗಳು-'ಪರಿಸರ', 'ಮಳೆನೀರು ಸಂರಕ್ಷಣೆ', 'ನೀರು ಜೀವ ಸಂಜೀವಿನಿ'.
21. 4-8-2004 : ಮಳೆ ನೀರು ಮತ್ತು ಆರೋಗ್ಯ ಹಾಗೂ ಪೌಷ್ಟಿಕತೆಗಳ ಬಗೆಗೆ ಉಪನ್ಯಾಸಗಳು, ಸ್ಪರ್ಧೆಗಳು ನಡೆದುವು. 150 ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.
22. 6-8-2004 ಹಿರೋಷಿಮಾ ಪ್ರಕೃತಿ ವಿನಾಶದಂತಹ ವಿಷಯ ಕುರಿತು ಕಾರ್ಯಕ್ರಮ.

# ಚಿಕ್ಕಮಗಳೂರು ಜಿಲ್ಲೆ



ಶುಕ್ರ ಸಂಕ್ರಮಣ ವೀಕ್ಷಣೆ

ಚಿಕ್ಕಮಗಳೂರು ಜಿಲ್ಲೆಯಲ್ಲಿ 6-8-2004ರಂದು ವೈಜ್ಞಾನಿಕ ಜಾಗ್ರತಿ ವರ್ಷ 2004 ವಿದ್ಯುಕ್ತವಾಗಿ ಉದ್ಘಾಟಿಸಲ್ಪಟ್ಟಿತು. ಇದಕ್ಕೆ ಮೊದಲು ಈ ಜಿಲ್ಲೆಯಲ್ಲಿ ನಡೆದ ಕಾರ್ಯಕ್ರಮಗಳು:

1. ವಿಶ್ವಪರಿಸರ ದಿನ - 5-6-2004 : 35 ಶಾಲೆಗಳಲ್ಲಿ ನಡೆಯಿತು. ಶ್ರಮದಾನ, ಸಸಿ ನೆಡುವ ಕಾರ್ಯಕ್ರಮ, ಪ್ಲಾಸ್ಟಿಕ್ ನಿರ್ಮೂಲನೆ ಮತ್ತು ಉಪನ್ಯಾಸಗಳ ನಡೆದುವು.
2. ಶುಕ್ರ ಸಂಕ್ರಮಣ 8-6-2004 : ಚಿಕ್ಕಮಗಳೂರು, ಕೊಡಿಗೆರೆ, ತರೀಕೆರೆಗಳಲ್ಲಿ ನಡೆದುವು.
3. 5-6-2004ರಂದು ತರೀಕೆರೆ, ರಂಗಾಪುರ, ಕೂಡೂರುಗಳಲ್ಲಿ 21-6-2004ರಂದು ಮಂಜುನಾಥಪುರದಲ್ಲಿ ಮತ್ತು 28-6-2004ರಂದು ಕಲ್ಕೆರೆ, ಕರೂರುಗಳಲ್ಲಿ 'ನೀರು-ಜೀವನ ಸಂಜೀವಿನಿ' ಎಂಬ ಕಾರ್ಯಕ್ರಮದಲ್ಲಿ ಉಪನ್ಯಾಸ, ಗಿಡ ನೆಡುವುದು ಹಾಗೂ ಮಣ್ಣು ಮತ್ತು ಸಾವಯವ ಗೊಬ್ಬರದ ಬಗೆಗೆ ಕಾರ್ಯಕ್ರಮಗಳು ನಡೆದುವು.
4. ವಿಜ್ಞಾನ ಮತ್ತು ಗಣಿತ ರಸಪ್ರಶ್ನೆ ಕಾರ್ಯಕ್ರಮ 23-7-2004ರಂದು ನಡೆಯಿತು.
5. 'ವೈಜ್ಞಾನಿಕ ಅರಿವು, ಅವಶ್ಯಕತೆಗಳು ಮತ್ತು ನಿರೀಕ್ಷೆಗಳು' ಬಗೆಗೆ ವಿದ್ಯಾರ್ಥಿಗಳಿಗೆ ಕಾರ್ಯಕ್ರಮ 26-7-2004ರಂದು ನಡೆಸಲಾಯಿತು.
6. 'ವಿಜ್ಞಾನ ಗೋಷ್ಠಿ' ಕಾರ್ಯಕ್ರಮ 5-7-2004ರಂದು ನಡೆಯಿತು.
7. 4-8-2004ರಿಂದ 13-8-2004ರವರೆಗೆ ಜಿಲ್ಲೆಯ 40 ಶಾಲೆಗಳಲ್ಲಿ ಸಂಚಾರಿ ವಿಜ್ಞಾನ ವಸ್ತು ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.
8. 30-8-2004 - ವನಮಹೋತ್ಸವ ಕಾರ್ಯಕ್ರಮ ನಡೆಯಿತು.
9. ವಿಜ್ಞಾನಿಗಳು ಮತ್ತು ಪರಿಸರ ವಾದಿಗಳೊಡನೆ ಸಂವಾದ ಆಗಸ್ಟ್ ಮಾಹೆಯಲ್ಲಿ ನಡೆಯಿತು.
10. 'ಮಳೆನೀರು ಕೊಯ್ಲು' ಕಾರ್ಯಕ್ರಮವು ಆಗಸ್ಟ್‌ನಲ್ಲಿ ನಡೆಯಿತು.
11. 'ಜೈವಿಕ ತಂತ್ರಜ್ಞಾನ-ವರವೋ ಶಾಪವೋ' ಚರ್ಚೆ ಆಗಸ್ಟ್ 2004ರಲ್ಲಿ ನಡೆಯಿತು.
12. 'ಜೀವವೈವಿಧ್ಯ' - ಆಗಸ್ಟ್ 2004

# ಚಿತ್ರದುರ್ಗ ಜಿಲ್ಲೆ

ಚಿತ್ರದುರ್ಗ ಜಿಲ್ಲೆಯ ವೈಜ್ಞಾನಿಕ ಜಾಗ್ರತಿ ವರ್ಷ 2004ರ ಕಾರ್ಯಕ್ರಮಗಳನ್ನು ವ್ಯವಸ್ಥಿತವಾಗಿ ನಡೆಸಲಾಗಿದೆ. ಮಾರ್ಚ್ ತಿಂಗಳಲ್ಲಿ ಜಿಲ್ಲಾ ಸಮಿತಿಯ ರಚನೆಯೊಂದಿಗೆ ಕಾರ್ಯಕ್ರಮದ ನಾಂದಿಯಾಯಿತು. "ವಿಜ್ಞಾನ ಗಂಗಾ" ಶೀರ್ಷಿಕೆಯಡಿಯಲ್ಲಿ ಬಾನುಲಿ ಕಾರ್ಯಕ್ರಮಗಳು ಜರುಗಿದುವು. ಕಾರ್ಯಕ್ರಮಗಳು ಅತ್ಯುಚಿತವಾಗಿ ದಾಖಲಾಗಿವೆ.

1. ಏಪ್ರಿಲ್ 24 ರಿಂದ 28ರವರೆಗೆ ಜೋಗಿಮಠ ಗಿರಿಧಾಮದಲ್ಲಿ 150 ಪ್ರೌಢ ಶಾಲಾ ವಿದ್ಯಾರ್ಥಿನಿಯರಿಗಾಗಿ ಬೇಸಿಗೆ ಶೈಕ್ಷಣಿಕ ಶಿಬಿರವನ್ನು ಸಂಘಟಿಸಲಾಯಿತು. ಸದರಿ ಶಿಬಿರದಲ್ಲಿ ರಾಜ್ಯದ ಹೆಸರಾಂತ ಸಂಪನ್ಮೂಲ ವ್ಯಕ್ತಿಗಳು ಪಾಲ್ಗೊಂಡಿದ್ದರು.
2. 5-6-2004ರಂದು ವೈಜ್ಞಾನಿಕ ಜಾಗ್ರತಿ ವರ್ಷಾಚರಣೆ ಪ್ರಯುಕ್ತ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ಶಿಕ್ಷಕರ ತರಬೇತಿ ಕೇಂದ್ರದ ಶಿಕ್ಷಣಾರ್ಥಿಗಳಿಗೆ, ಚಿತ್ರದುರ್ಗ ನಗರದ ಸರ್ಕಾರಿ ಪ್ರಾಥಮಿಕ ಶಿಕ್ಷಕರ ತರಬೇತಿ ಕೇಂದ್ರದ ಶಿಕ್ಷಣಾರ್ಥಿಗಳಿಗೆ ಹಾಗೂ ಸರ್ಕಾರಿ ಶಿಕ್ಷಣ ಮಹಾ ವಿದ್ಯಾಲಯದ ಶಿಕ್ಷಣಾರ್ಥಿಗಳಿಗೆ ನಗರದ ಸ್ಥಳೀಯ ಕೇಬಲ್ ಟಿ.ವಿ. ನೆಟ್‌ವರ್ಕ್ ಮೂಲಕ ನಗರಾದ್ಯಂತ

ಹಾಗೂ ರೋಟರಿ ಕ್ಲಬ್ ಆಶ್ರಯದಲ್ಲಿ ರೋಟರಿ ಭವನದಲ್ಲಿ ಸಾರ್ವಜನಿಕರಿಗೆ ಶುಕ್ರ ಸಂಕ್ರಮಣ ಕುರಿತ ಜಾಗ್ರತಿ ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

3. 8-6-2004ರಂದು ಕಾರ್ಯಕ್ರಮ ಮುಂದುವರಿಯಿತು. ಈ ಎಲ್ಲಾ ಕಾರ್ಯಕ್ರಮಗಳಿಗೆ ವ್ಯಾಪಕವಾಗಿ ಮಾಧ್ಯಮ ವರದಿಗಳು ದಾಖಲಾಗಿವೆ.
4. ದಿನಾಂಕ 5 ಜೂನ್ 2004ರಂದು ನಗರದ ವಾಸವಿ ವಿದ್ಯಾಸಂಸ್ಥೆಯಲ್ಲಿ ಪರಿಸರ ಇಲಾಖೆಯ ಸಹಕಾರದೊಂದಿಗೆ ವಿಶ್ವ ಪರಿಸರ ದಿನಾಚರಣೆಯ ಜಿಲ್ಲಾದ್ಯಂತದ ಸರಣಿ ಕಾರ್ಯಕ್ರಮವನ್ನು ಜಿಲ್ಲಾ ಅಧಿಕಾರಿ ಆಯುಕ್ತರಾದ ಶ್ರೀಯುತ ಪಾಪಣ್ಣನವರು ಉದ್ಘಾಟಿಸಿದರು. ಪಕ್ಷಿಗಳನ್ನು ಕುರಿತ ವಿಶಿಷ್ಟ ಸ್ಲೈಡ್ ಷೋ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಸುಮಾರು 1000 ವಿದ್ಯಾರ್ಥಿಗಳು ಭಾಗವಹಿಸಿದ್ದರು. ದಿನಾಂಕ 28 ಜೂನ್ 2004ರಂದು ವಿಜ್ಞಾನ ಕೇಂದ್ರದ ಆವರಣ ಹಾಗೂ ಮಾಧ್ಯಮಿಕ ಶಾಲಾ ಆವರಣದಲ್ಲಿ, ಬಿಆರ್‌ಸಿ ಕಛೇರಿ ಆವರಣದಲ್ಲಿ ಆದ್ರನಾಯಕನಹಳ್ಳಿ ಗುಡ್ಡದ ರಂಗವ್ವನಹಳ್ಳಿ ಗುಯಿಲಾಳು, ಬುರುಜನಕೊಪ್ಪ ಮುಂತಾದ ಕಡೆಗಳಲ್ಲಿ ಟೆಲಿಸ್ಕೋಪ್‌ನಲ್ಲಿ, ಪ್ರತಿಫಲಿತ ಬಿಂಬದಿಂದ ಹಾಗೂ ಸೋಲಾರ್ ಗಾಗಲ್ಸ್‌ಗಳ ಮೂಲಕ ಸಾರ್ವಜನಿಕರಿಗೆ ವೀಕ್ಷಿಸಲು ಅವಕಾಶ ಕಲ್ಪಿಸಲಾಗಿತ್ತು.
5. ದಿನಾಂಕ 14 ಜೂನ್ 04ರಂದು ಮೊಳಕಾಲ್ಮೂರು ತಾಲ್ಲೂಕಿನ ಪ್ರೌಢಶಾಲಾ ಮಕ್ಕಳಿಗೆ ಪರಿಸರ ದಿನಾಚರಣೆ ಪ್ರಯುಕ್ತ ಜಾಥಾ ಕಾರ್ಯಕ್ರಮ. ಕಾಡಿನ ಪರಿಸರ ವ್ಯವಸ್ಥೆ ಅಧ್ಯಯನ 7000 ವಿಧ್ಯಾರ್ಥಿಗಳಿಗೆ ಪರಿಸರ ಮಿತ್ರ ಎಂಬ ಸ್ವಯಂ ಮೌಲ್ಯ ಮಾಪನದಲ್ಲಿ ತೊಡಗಿಸಲಾಯಿತು. ನಂತರದ ಪರಿಸರ ಜಾಗ್ರತಿ ರಸಪ್ರಶ್ನೆ ಕಾರ್ಯಕ್ರಮದಲ್ಲಿ 25 ಶಾಲಾಮಕ್ಕಳು ಭಾಗವಹಿಸಿದ್ದರು.
6. 16-6-04ರಂದು ಹೊಸದುರ್ಗದಲ್ಲಿ 8000 ವಿದ್ಯಾರ್ಥಿಗಳ ಬೃಹತ್ ಜಾಥಾದೊಂದಿಗೆ ಪರಿಸರ ದಿನಾಚರಣೆ ಪ್ರಾರಂಭವಾಗಿ ಜಲ ಪರಿಸರ ವ್ಯವಸ್ಥೆಯಲ್ಲಿ ತೊಡಗಿಸಲಾಯಿತು. ನಂತರ ಪರಿಸರ ಜಾಗ್ರತಿ ರಸಪ್ರಶ್ನೆ ಕಾರ್ಯಕ್ರಮ ಹಾಗೂ 7500 ವಿದ್ಯಾರ್ಥಿಗಳಿಗೆ ಪರಿಸರ ಶತ್ರು ಮಿತ್ರ ನಡೆಸಲಾಯಿತು.
7. ಜೂನ್ ತಿಂಗಳಿನಾದ್ಯಂತ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮಗಳು ನಡೆದುವು. ಇದಕ್ಕಾಗಿ ಸ್ಪರ್ಧೆಗಳು ನಡೆದುವು. ಪ್ರಮಾಣ ಪತ್ರಗಳನ್ನು ನೀಡಲಾಯಿತು.
8. ಜಿಲ್ಲೆಯ ತಾಲ್ಲೂಕುಗಳಲ್ಲಿ ಕಾಡಿನ ಪರಿಸರ ವ್ಯವಸ್ಥೆ ಬಗೆಗೆ ಮೊಳಕಾಲ್ಮೂರು, (14-6-2004), ಜಲ ಪರಿಸರ ವ್ಯವಸ್ಥೆ ಬಗೆಗೆ ಹೊಸದುರ್ಗ (16-6-2004), ಹಸಿರೇ ಉಸಿರು ಬಗೆಗೆ ಹೊಳಲ್ಕೆರೆ (17-6-2004), ಕಸದ ನಿರ್ವಹಣೆ ಬಗೆಗೆ ಚಿತ್ರದುರ್ಗ (18-6-2004), ಮನೆಗಳಲ್ಲಿ ನೀರಿನ ನಿರ್ವಹಣೆ ಬಗೆಗೆ ಚಳ್ಳಕೆರೆ (26-6-2004) ಜಲ ಪರಿಸರ ವ್ಯವಸ್ಥೆ ಬಗೆಗೆ ಹಿರಿಯೂರು (28-6-2004), ಈ ಸ್ಥಳಗಳಲ್ಲಿ ಸ್ಪರ್ಧಾ ಕಾರ್ಯಕ್ರಮಗಳು ನಡೆದುವು.
9. 30-6-2004 ರಂದು ಈ ಸ್ಪರ್ಧೆಗಳ ವಿಜೇತರಿಗೆ ಜಿಲ್ಲಾ ಮಟ್ಟದ ಕಾರ್ಯಕ್ರಮ ನಡೆಯಿತು. ಇದರ ಉದ್ಘಾಟನೆಯನ್ನು ಶ್ರೀ ಎಂ.ಎ. ಸಾದಿಕ್, ಜಿಲ್ಲಾಧಿಕಾರಿಗಳು ನೆರವೇರಿಸಿಕೊಟ್ಟರು. ಶ್ರೀ ಗೋವಿಂದ ಭಟ್ಟ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಮತ್ತು ಶ್ರೀ ನಾರಾಯಣಸ್ವಾಮಿ, ಸಿ.ಇ.ಓ., ಜಿಲ್ಲಾ ಪಂಚಾಯತ್, ಭಾಗವಹಿಸಿದ್ದರು.
10. 28-7-2004 ರಿಂದ 15-8-2004 ಅವಧಿಯಲ್ಲಿ ಚಿತ್ರದುರ್ಗದ ಜಿಲ್ಲಾದ್ಯಂತ ವಿ.ಐ.ಟಿ.ಎಂ. ಸಂಚಾರಿ ವಿಜ್ಞಾನ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಉನ್ನತ ಶಿಕ್ಷಣ ಸಚಿವ ಮಂಜುನಾಥ ಅವರು ಉದ್ಘಾಟಿಸಿದರು. ಶಾಸಕ ಶ್ರೀ ತಿಪ್ಪಾರೆಡ್ಡಿ ಭಾಗವಹಿಸಿದ್ದರು. ಪ್ರದರ್ಶನವು ಹಿರಿಯೂರು, ಐಮಂಗಳ, ಧರ್ಮಪುರ, ಪರಶುರಾಮಪುರ, ಚಳ್ಳಕೆರೆ, ತಳುಕು, ಬಿ.ಜಿ.ಕೆರೆ, ಮೊಳಕಾಲ್ಮೂರು, ನಾಯಕನಹಟ್ಟಿ ತುರುವನೂರು, ಸಿರಿಗೆರೆ, ಚಿಕ್ಕ ಜಾಜೂರು, ಹೊಳಲ್ಕೆರೆ, ಎನ್.ಜಿ.ಹಳ್ಳಿ, ಹೊಸದುರ್ಗ, ಜಾನಕಲ್ಲು, ತಾಳ್ಯ, ಚಿತ್ರದುರ್ಗಗಳಲ್ಲಿ ನಡೆಯಿತು.
11. 16-9-2004ರಂದು ಓಜೋನ್ ಮತ್ತು ಜೈವಿಕ ತಂತ್ರಜ್ಞಾನ ಕಾರ್ಯಕ್ರಮ ಚಿತ್ರದುರ್ಗದಲ್ಲಿ ನಡೆಯಿತು.
12. ಇದಲ್ಲದೆ ದಿನ ನಿತ್ಯದಲ್ಲಿ ವೈಜ್ಞಾನಿಕ ಜಾಗ್ರತಿ ಕುರಿತು ಉಪನ್ಯಾಸಗಳು, ಪ್ರಾತ್ಯಕ್ಷಿಕೆಗಳು ನಡೆದಿವೆ.
13. ಚಿತ್ರದುರ್ಗ, ಚಳ್ಳಕೆರೆ, ಹಿರಿಯೂರು, ಹೊಳಕ್ಕೆರೆ, ಹೊಸದುರ್ಗ, ಮೊಳಕಾಲ್ಮೂರುಗಳ ಸುಮಾರು 100 ಗ್ರಾಮಗಳಲ್ಲಿ ಜಾಥಾ ನಡೆದಿವೆ.
14. 18-6-2004ರಂದು ಕಸನಿರ್ವಹಣೆ ಕಾರ್ಯಕ್ರಮ - 800 ಜನ ವಿದ್ಯಾರ್ಥಿಗಳು ಭಾಗವಹಿಸಿದ್ದರು.
15. 25-6-2004ರಂದು ಜಲ ನಿರ್ವಹಣೆ ಬಗ್ಗೆ ಚಳ್ಳಕೆರೆಯಲ್ಲಿ 1500 ವಿದ್ಯಾರ್ಥಿಗಳಿಗೆ ಕಾರ್ಯಕ್ರಮ ನಡೆಯಿತು.
16. 28-7-2004ರಂದು ಹಿರಿಯೂರಿನ 1000 ವಿದ್ಯಾರ್ಥಿಗಳಿಗೆ ಜಲ ಪರಿಸರ ವ್ಯವಸ್ಥೆ ಕಾರ್ಯಕ್ರಮ ನಡೆಯಿತು.
17. 30-7-2004ರಂದು 2000 ವಿದ್ಯಾರ್ಥಿಗಳ ಜಾಥಾ.

# ತುಮಕೂರು ಜಿಲ್ಲೆ





ತುಮಕೂರು ಜಿಲ್ಲೆಯಲ್ಲಿ ವೈಜ್ಞಾನಿಕ ಜಾಗ್ರತಿ ವರ್ಷ-2004ರ ಕಾರ್ಯಕ್ರಮವು ತುಮಕೂರು ವಿಜ್ಞಾನ ಕೇಂದ್ರದ ಆಶ್ರಯದಲ್ಲಿ ನಡೆಯಿತು.

1. 5-6-2004ರಂದು ಮಳೆ ನೀರಿನ ಕೊಯ್ಲು ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾಧಿಕಾರಿಗಳಾದ ಎಂ.ಬಿ.ದ್ಯಾಬೇರಿ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶ್ರೀ ಸಿದ್ದಲಿಂಗೇಗೌಡ ಅವರು ಭಾಗವಹಿಸಿದ್ದರು.
2. 14-6-2004ರಂದು 'ಮಳೆನೀರಿನ ಸುಗ್ಗಿ ಮತ್ತು ಬರ ಪರಿಹಾರ - ಒಂದು ವೈಜ್ಞಾನಿಕ ವಿಶ್ಲೇಷಣೆ' ಬಗೆಗೆ ಕಾರ್ಯಾಗಾರವಿದ್ದಿತು.
3. 18-6-2004ರಂದು 'ಭಾರತದಲ್ಲಿ ವಿಜ್ಞಾನದ ಸ್ಥಿತಿ' ಕುರಿತು ಉಪನ್ಯಾಸ ನಡೆಯಿತು. ಹಾಗೂ ವಿಜ್ಞಾನಿಗಳೊಡನೆ ಸಂವಾದ ಕಾರ್ಯಕ್ರಮವಾಗಿದ್ದಿತು.
4. 2-7-2004ರಂದು ವೈಜ್ಞಾನಿಕ ಜಾಗ್ರತಿ ವರ್ಷದ ಅಂಗವಾಗಿ ಜಿಲ್ಲಾ ಮಟ್ಟದ ಸಂಪನ್ಮೂಲ ವ್ಯಕ್ತಿಗಳ ತರಬೇತಿ ಶಿಬಿರ ಮತ್ತು ಸಂಚಾರಿ ವಿಜ್ಞಾನ ಕಾರ್ಯಮಾದರಿಗಳ ಜಿಲ್ಲಾ ಮಟ್ಟದ ಜಾಥಾಗಳು ನಡೆದುವು.
5. 5-7-2004ರಿಂದ 24-7-2004ರವರೆಗೆ ವಿಐಟಿಎಂ ಸಂಚಾರಿ ವಿಜ್ಞಾನ ಮತ್ತು ಪ್ರದರ್ಶನಾಲಯವು ಜಿಲ್ಲೆಯ ಬೇರೆ ಬೇರೆ ತಾಲ್ಲೂಕುಗಳಲ್ಲಿ ಸಂಚರಿಸಿ ಸುಮಾರು 22800 ವಿದ್ಯಾರ್ಥಿಗಳು ವೀಕ್ಷಿಸಿದರು.
6. ಜನಪ್ರಿಯ ಉಪನ್ಯಾಸಗಳ ಬಗೆಗೆ ಜಿಲ್ಲಾ ಮಟ್ಟದ ಸಂಪನ್ಮೂಲ ವ್ಯಕ್ತಿಗಳ ತರಬೇತಿ ಶಿಬಿರವು ನಡೆಯಿತು.
7. 5-7-2004ರಂದು ಎಲೆಕ್ಟ್ರಾನಿಕ್ಸ್ ತರಬೇತಿ ಶಿಬಿರವು ಭೌತಶಾಸ್ತ್ರ ಬೋಧಕರಿಗಾಗಿ ನಡೆಯಿತು.
8. 17-7-2004ರಂದು 'ನೀರು ಜೀವನ ಸಂಜೀವಿನಿ' ಉಪನ್ಯಾಸ ಕಾರ್ಯಕ್ರಮ ನಡೆಯಿತು.
9. 21-7-2004ರಂದು 'ವೈದ್ಯ ವಿಜ್ಞಾನಿಗಳೊಂದಿಗೆ ಸಂವಾದ' ಕಾರ್ಯಕ್ರಮವು 'ಕರ್ನಾಟಕದಲ್ಲಿ ಆರೋಗ್ಯ ಪರಿಸ್ಥಿತಿ, ಸಮಸ್ಯೆ ಮತ್ತು ಸವಾಲುಗಳು' ಕುರಿತ ಸಂವಾದ ಕಾರ್ಯಕ್ರಮವನ್ನು ಕರಾವಿಪ ಅಧ್ಯಕ್ಷರಾದ ಡಾ॥ ಸ.ಜ.ನಾಗಲೋಟಿಮಠ ಅವರು ನಡೆಸಿಕೊಟ್ಟರು.
10. 26-7-2004ರಂದು 'ವಂಶವಾಹಿ ರೂಪಾಂತರಿ ತಳಿ ವರವೇ ಶಾಪವೇ' ಎಂಬ ವಿಷಯವಾಗಿ ಚರ್ಚೆ ಏರ್ಪಡಿಸಲಾಗಿತ್ತು.
11. 25-8-2004 ಮತ್ತು 26-8-2004 : ಈ ದಿನಗಳಂದು ರಾಷ್ಟ್ರೀಯ ಹಸಿರು ಪಡೆ ಸಂಚಾಲಕರಿಗೆ ತರಬೇತಿ ಶಿಬಿರ ನಡೆಯಿತು. ಜೀವಿ ವೈವಿಧ್ಯತೆ ಕಾಯ್ದೆ ಮತ್ತು ಪಂಚಾಯ್ತಿ ಹಂತದಲ್ಲಿ ಜೀವಿ ವೈವಿಧ್ಯತೆ ದಾಖಲಾತಿ ಕುರಿತು ತರಬೇತಿ ನೀಡಲಾಯಿತು. ಕೆರೆಗಳ ಅಧ್ಯಯನ ಕುರಿತು ಹಾಗೂ ನಿಸರ್ಗ ಚಾರಣ ಕುರಿತು ತರಬೇತಿ ನೀಡಲಾಯಿತು.
12. 7-9-2004 ಮತ್ತು 8-9-2004ರಂದು ನಿಸರ್ಗ ಚಾರಣ ತರಬೇತಿ ಶಿಬಿರವು ರಾಷ್ಟ್ರೀಯ ಹಸಿರು ಪಡೆ ಕಾರ್ಯಕರ್ತರಿಗಾಗಿ ನಡೆಯಿತು.
13. 16-9-2004ರಂದು ಓಜೋನ್ ಸಂರಕ್ಷಣಾ ದಿನಾಚರಣೆಯ ಬಗೆಗೆ ಜನಪ್ರಿಯ ಉಪನ್ಯಾಸ ಕಾರ್ಯಕ್ರಮ ನಡೆಯಿತು.
14. 21-9-200ರಂದು ಮಳೆ ನೀರಿನ ಸುಗ್ಗಿಯ ಕಾರ್ಯಕ್ರಮದಲ್ಲಿ 'ಮಳೆ ನೀರಿನ ಸುಗ್ಗಿ ಏಕೆ? ಹೇಗೆ?' ಎಂಬ ವಿಷಯವಾಗಿ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು.

15. 22-9-2004ರಂದು 'ವಂಶವಾಹಿನಿ ರೂಪಾಂತರ ತಳಿಗಳು ವರವೋ? ಶಾಪವೋ?' ಎಂಬುದರ ಬಗೆಗೆ ಸಂವಾದ ಕಾರ್ಯಕ್ರಮಗಳು ನಡೆದುವು.

## ದಾವಣಗೆರೆ ಜಿಲ್ಲೆ

ದಾವಣಗೆರೆ ಜಿಲ್ಲೆಯಲ್ಲಿನ ವೈಜ್ಞಾನಿಕ ಜಾಗ್ರತಿ ವರ್ಷ-2004ರ ಕಾರ್ಯಕ್ರಮಗಳು 23-7-2004ರಂದು ಉದ್ಘಾಟನೆ ಗೊಂಡವು, ಜಿಲ್ಲಾಧಿಕಾರಿಗಳು ಶ್ರೀ ಎಂ.ಎಸ್.ರವಿಕುಮಾರ್, ಅವರು ಇದರ ಉದ್ಘಾಟನೆ ನಡೆಸಿದರು.

1. ಜೂನ್ ಹಾಗೂ ಜುಲೈ ತಿಂಗಳುಗಳಲ್ಲಿ ಶಾಲಾ ಆವರಣದಲ್ಲಿ ಸಸಿನೆಡುವುದು, ಜೀವಿ ವೈವಿಧ್ಯದ ಬಗೆಗೆ ಕಾರ್ಯಕ್ರಮಗಳು, ಪರಿಸರ ದಿನ, ಶುಕ್ರ ಸಂಕ್ರಮಣ ಮತ್ತು ಜೀವಿ ವೈವಿಧ್ಯದ ಬಗೆಗೆ ಗೋಷ್ಠಿ ಏರ್ಪಡಿಸಲಾಗಿದ್ದಿತು. ವಿದ್ಯಾರ್ಥಿಗಳು, ಶಿಕ್ಷಕರು, ಮತ್ತು ಸಾರ್ವಜನಿಕರು ಭಾಗವಹಿಸಿದ್ದರು.
2. 23-7-2004ರಂದು ಜೀವಿ ವೈವಿಧ್ಯದ ಬಗೆಗೆ ತಾಂತ್ರಿಕ ಅಧಿವೇಶನ ನಡೆಯಿತು. ಉದ್ಘಾಟನೆಯನ್ನು ಶ್ರೀ ಎಂ.ಎಸ್.ರವಿಶಂಕರ್, ಜಿಲ್ಲಾಧಿಕಾರಿಗಳು ನೆರವೇರಿಸಿದರು.
3. ಆಗಸ್ಟ್ 2004 - 'ಪ್ರಕೃತಿ ಶಿಬಿರ', 'ಸಂಚಾರಿ ವಿಜ್ಞಾನ ಪ್ರದರ್ಶನ', ಪ್ರಕೃತಿ ಶಿಬಿರವು ತೀರ್ಥ ರಾಮೇಶ್ವರ ಕಾಡಿನಲ್ಲಿ ನಡೆಯಿತು. ಸಂಚಾರಿ ವಿಜ್ಞಾನ ಪ್ರದರ್ಶನವು 16 ದಿನಗಳ ಕಾಲ ನಡೆಯಿತು.
4. ಸೆಪ್ಟೆಂಬರ್ 2004 ಜೈವಿಕ ತಂತ್ರಜ್ಞಾನದ ಬಗೆಗೆ ಉಪನ್ಯಾಸ ಮತ್ತು ಚರ್ಚೆ, ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ನಡೆದುವು.

## ಧಾರವಾಡ ಜಿಲ್ಲೆ

ಧಾರವಾಡ ಜಿಲ್ಲೆಯಲ್ಲಿ ವೈಜ್ಞಾನಿಕ ಜಾಗ್ರತಿ ವರ್ಷ-2004 ಕಾರ್ಯಕ್ರಮವು 29-6-2004ರಂದು ಜಿಲ್ಲಾಧಿಕಾರಿಗಳು ಹಾಗೂ ವೈಜ್ಞಾನಿಕ ಜಾಗ್ರತಿ ವರ್ಷ ಸಂಘಟನಾ ಸಮಿತಿಯ ಅಧ್ಯಕ್ಷರಾದ ಶ್ರೀ ಬಸವರಾಜ ಬೆಟಗೇರಿ ಅವರಿಂದ ಉದ್ಘಾಟಿಸಲ್ಪಟ್ಟಿತು.

ವಿಜ್ಞಾನ ಜಾಗ್ರತಿ, ಜೀವಿ ವೈವಿಧ್ಯತೆ, ಹನಿನೀರಾವರಿ ಮತ್ತು ಗ್ರಾಮೀಣ ಅಭಿವೃದ್ಧಿಗಾಗಿ ಸಮಗ್ರ ಯೋಜನೆಗಳನ್ನು ಕುರಿತು ಉಪನ್ಯಾಸಗಳನ್ನು ಏರ್ಪಡಿಸಲಾಗಿದ್ದಿತು. ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳು ಇದರಲ್ಲಿ ಭಾಗವಹಿಸಿದ್ದರು.

ವೈಜ್ಞಾನಿಕ ಜಾಗ್ರತಿ ವರ್ಷ-2004 ಇದರಲ್ಲಿ ತಿರುಗಾಟ 2004-05ರ ಅಂಗವಾಗಿ ಸರಕಾರಿ ಪ್ರೌಢಶಾಲೆ, ಕಲಘಟಗಿ, ಸರಕಾರಿ ಪ್ರೌಢಶಾಲೆ ಹಿರೇಹೊನ್ನಹಳ್ಳಿ, ಸರಕಾರಿ ಪ್ರೌಢಶಾಲೆ ಯರಗಪ್ಪಿ, ಪಂಡಿತ ನೆಹರೂ ಪ್ರೌಢಶಾಲೆ, ಶಿರಗುಪ್ಪಿ ಮುಂತಾದ ಶಾಲೆಗಳಲ್ಲಿ ಅನೇಕ ಪ್ರಾಣಿ, ಪಕ್ಷಿ, ಗಿಡ, ಮರ, ಮೂಲಿಕೆ, ಚಿಟ್ಟೆ ಕೀಟ, ಪ್ರಭೇದಗಳನ್ನು ಗುರುತಿಸುವುದು, ಪರಿಸರಕ್ಕೆ ಮನುಷ್ಯನಿಂದಾಗುವ ಹಾನಿ, ಮಳೆ ನೀರಿನ ಸಂರಕ್ಷಣೆ, ಜೈವಿಕ ತಂತ್ರಜ್ಞಾನ - ಈ ವಿಷಯಗಳ ಬಗೆಗೆ ಸ್ಪರ್ಧೆಗಳು ಜುಲೈ ಮಾಹೆಯಲ್ಲಿ ನಡೆದು ವರದಿಗಳು ಬಂದಿವೆ.

ಆಗಸ್ಟ್ 10, 2004ರಂದು ಧಾರವಾಡದ ಕೃಷಿ ವಿಶ್ವವಿದ್ಯಾಲದಲ್ಲಿ ವಿಜ್ಞಾನಿಗಳೊಡನೆ ಸಂವಾದ ಕಾರ್ಯಕ್ರಮ ಏರ್ಪಡಿಸಿ ಜೈವಿಕ ತಂತ್ರಜ್ಞಾನ ವರವೋ, ಶಾಪವೋ ಎಂಬುದರ ಬಗೆಗೆ ಉಪನ್ಯಾಸಗಳು ಮತ್ತು ಮಧ್ಯಾಹ್ನ ಅದರ ಬಗೆಗೆ ಚರ್ಚಾಗೋಷ್ಠಿಗಳು ನಡೆದುವು. ಜಿಲ್ಲಾ ಮಟ್ಟದ ಈ ಸ್ಪರ್ಧೆಯಲ್ಲಿ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಭಾಗವಹಿಸಿ ತಮ್ಮ ವಾದ ಮಂಡಿಸಿದರು.

## ಬಳ್ಳಾರಿ ಜಿಲ್ಲೆ

ಬಳ್ಳಾರಿ ಜಿಲ್ಲೆಯಲ್ಲಿ ವೈಜ್ಞಾನಿಕ ಜಾಗ್ರತಿ ವರ್ಷ 2004 ಉದ್ಘಾಟನೆಯು 15-7-2004ರಂದು ತುಂಗಭದ್ರಾ ಗ್ರಾಮೀಣ ಬ್ಯಾಂಕಿನ ಅಧ್ಯಕ್ಷ ಪಿ.ಎಸ್.ಮೂರ್ತಿ ಅವರು ಉದ್ಘಾಟಿಸಿದರು. ಇದಕ್ಕೆ ಮೊದಲು ಕರ್ನಾಟಕದ ಹಕ್ಕಿಗಳು ಮತ್ತು ಶುಕ್ರ ಸಂಕ್ರಮಣ ಕಾರ್ಯಕ್ರಮಗಳು ಪೂರ್ವ ಭಾವಿ ಕಾರ್ಯಕ್ರಮಗಳಾಗಿ ನಡೆದುವು.

1. 25-7-2004ರಂದು 'ಜೀವಿ ವೈವಿಧ್ಯತೆ ಹಾಗೂ ಸಸ್ಯ ಜೀವಿ ಸಂರಕ್ಷಣಾ ಜಾಗೃತಿ ಕಾರ್ಯಕ್ರಮ'ವು ಅರಣ್ಯ ಇಲಾಖೆಯ ಸಹಯೋಗದೊಡನೆ ವೈಜ್ಞಾನಿಕ ಜಾಗ್ರತಿ ವರ್ಷದ ಅಂವಾಗಿ ನಡೆಯಿತು. ಶ್ರೀ.ಎಸ್.ಉತ್ತಯ್ಯ, ಅರಣ್ಯ ಇಲಾಖೆ, ಬಳ್ಳಾರಿ ಇವರು ಉದ್ಘಾಟಿಸಿದರು.
2. ಆಗಸ್ಟ್ 2004ರ ನಾಲ್ಕು ಕಾರ್ಯಕ್ರಮಗಳು:
   ಅ. ಜೀವಿ ವೈವಿಧ್ಯ ಮತ್ತು ಸಂರಕ್ಷಣೆ
   ಆ. ತಾಲ್ಲೂಕು ಸಂಚಾಲಕರಿಗೆ ತರಬೇತಿ

ಇ. 3 ಸ್ಥಳಗಳಲ್ಲಿ ಪರಿಸರ ಅಧ್ಯಯನಗಳು

ಈ. ಗ್ರಾಮ ಪಂಚಾಯಿತಿ ಸದಸ್ಯರಿಗೆ (7 ತಾಲ್ಲೂಕು) ತರಬೇತಿ ಕಾರ್ಯಕ್ರಮಗಳು.

3. ಸೆಪ್ಟೆಂಬರ್ - 2004 ಜಿಲ್ಲೆಯ 7 ತಾಲ್ಲೂಕುಗಳಾದ ಹೂವಿನ ಹಡಗಲಿ, ಹಗರಿಬೊಮ್ಮನಹಳ್ಳಿ, ಕೂಡ್ಲಿಗಿ, ಸಂಡೂರು, ಬಳ್ಳಾರಿ, ಸಿರಗುಪ್ಪ ಹೊಸಪೇಟೆ ತಾಲ್ಲೂಕುಗಳಲ್ಲಿ ಸಂಚಾರಿ ವಿಜ್ಞಾನ ವಸ್ತು ಪ್ರದರ್ಶನಗಳು ನಡೆದುವು.

## ಬಿಜಾಪುರ



ಬಿಜಾಪುರದಲ್ಲಿ ಮೇ, ಜೂನ್, ಜುಲೈ ತಿಂಗಳುಗಳಲ್ಲಿ ಜಿಲ್ಲೆಯ ಬೇರೆ ಬೇರೆ ಭಾಗಗಳಲ್ಲಿ ಸಂಚರಿಸಿ ಜಿಲ್ಲಾ ಹಾಗೂ ತಾಲ್ಲೂಕು ಸಮಿತಿಗಳನ್ನು ರಚಿಸಲಾಯಿತು.

ವೈಜ್ಞಾನಿಕ ಜಾಗ್ರತಿ ವರ್ಷದ ಉದ್ಘಾಟನೆಯು 4-8-2004ರಂದು ಶ್ರೀ ರಾಮಚಂದ್ರ, ಹೊಸಪೇಟೆ ಸಾ.ಶಿ.ಇ. ಅವರಿಂದ ನಡೆಯಿತು. ನೀರು ಮತ್ತು ನಿರ್ವಹಣೆ, ಜೈವಿಕ ತಂತ್ರಜ್ಞಾನದ ಬಗೆಗೆ ಉಪನ್ಯಾಸ ಚರ್ಚೆಗಳು ನಡೆದುವು. 3-7-2004, 14-7-2004, 17-7-2004 ಮತ್ತು 22-7-2004ರಂದು ವೈಜ್ಞಾನಿಕ ಜಾಗ್ರತಿ ವರ್ಷದ ಬಗ್ಗೆ ಶಿಕ್ಷಕರಿಗೆ ತರಬೇತಿ ಮತ್ತು ಪೂರ್ವ ತರಬೇತಿ ಕಾರ್ಯಕ್ರಮಗಳು ನಡೆದುವು.

### ಮುಂದಿನ ಕಾರ್ಯಕ್ರಮಗಳು:

1. 25-8-2004 - ಬಸವನ ಬಾಗೇವಾಡಿ ತಾಲ್ಲೂಕಿನ ಮುತ್ತಗಿ ಗ್ರಾಮದಲ್ಲಿ (ಅ) ನೈಸರ್ಗಿಕ ವಿಕೋಪಗಳು ಹಾಗೂ ಮುನ್ನೆಚ್ಚರಿಕೆ ಕ್ರಮಗಳು, ಎಂಬ ವಿಷಯವಾಗಿ ಮತ್ತು (ಆ) ಅರಣ್ಯ ಮತ್ತು ಬೆಳಸುವಿಕೆ ಎಂಬ ವಿಷಯವಾಗಿ ಕಾರ್ಯಕ್ರಮ ನಡೆಯಿತು.
2. 27-8-2004 - ಇಂಡಿತಾಲೂಕಿನ ಚಡಚಣವಲಯದಲ್ಲಿ (ಅ) ಜೈವಿಕ ತಂತ್ರಜ್ಞಾನದ ಬಗೆಗೆ (ಆ) ಆಹಾರ ಮತ್ತು ಪೌಷ್ಟಿಕತೆಯ ಬಗೆಗೆ ಉಪನ್ಯಾಸ ಮತ್ತು ಚರ್ಚೆಗಳು ನಡೆದುವು.
3. 31-8-2004 - (ಅ) ಮುದ್ದೇಬಿಹಾಳದಲ್ಲಿ ನೀರು ಮತ್ತು ನಿರ್ವಹಣೆ ಕಾರ್ಯಕ್ರಮ ನಡೆಯಿತು ಹಾಗೂ (ಆ) ಪಕ್ಷಿ ವೀಕ್ಷಣೆ ಮತ್ತು ಪರಿಚಯ ಕಾರ್ಯಕ್ರಮವು ನಡೆಯಿತು.
4. 1-9-2004 - (ಅ) ಜಲಾನಯನ ಅಭಿವೃದ್ಧಿ ಕಾರ್ಯಕ್ರಮ ಮತ್ತು (ಆ) ಪರಿಸರ ವಿಜ್ಞಾನ ಕಾರ್ಯಕ್ರಮಗಳು ನಡೆದುವು.
5. ಗೊಲಗೇರಿಯಲ್ಲಿ 3-9-2004 (ಅ) ಮಣ್ಣು ಹಾಗೂ ಅದರ ಸಂರಕ್ಷಣೆ (ಆ) ಆರೋಗ್ಯ ಮತ್ತು ಪೌಷ್ಟಿಕಾಂಶದ ಬಗೆಗೆ (ಇ) ನೀರು ಹಾಗೂ ಅದರ ನಿರ್ವಹಣೆ ಬಗೆಗೆ ಕಾರ್ಯಕ್ರಮಗಳು ನಡೆದುವು.
6. ಬಿಜಾಪುರದಲ್ಲಿ 4-9-2004 (ಅ) 'ನೀರಿನ ಬಳಕೆ, ಸಂರಕ್ಷಣೆ ಮತ್ತು ದಾಸ್ತಾನು' ಕಾರ್ಯಕ್ರಮ ಮತ್ತು (ಆ) 'ಪಕ್ಷಿಗಳ ವೀಕ್ಷಣೆ ಹಾಗೂ ಪರಿಚಯ' ಕಾರ್ಯಕ್ರಮಗಳು ನಡೆದುವು.
7. 9-9-2004ರಂದು ಅರಕೇರಿಯಲ್ಲಿ (ಅ) ಪರಿಸರ ಕಾರ್ಯಕ್ರಮ (ಆ) ಆಹಾರ ಮತ್ತು ಪೌಷ್ಟಿಕಾಂಶದ ಬಗೆಗೆ ಕಾರ್ಯಕ್ರಮಗಳು ನಡೆದುವು.

# ಬೀದರ್ ಜಿಲ್ಲೆ





ಬೀದರ್ ಜಿಲ್ಲೆಯಲ್ಲಿ ವೈಜ್ಞಾನಿಕ ಜಾಗ್ರತಿ ವರ್ಷ-2004 ಉದ್ಘಾಟನೆಯು 5-6-2004ರಂದು ನಡೆಯಿತು. ಪ್ರೊ. ಅನಿಲ್ ಕುಮಾರ್ ಅಣದೊರೆ ಮತ್ತು ಪ್ರೊ. ಎಸ್.ವಿ.ಪನಶೆಟ್ಟಿ ಅವರು ಮಾತನಾಡಿದರು.

1. ಜೂನ್6 ರಂದು ಶುಕ್ರ ಸಂಕ್ರಮಣ ವೀಕ್ಷಣೆ ಕಾರ್ಯಕ್ರಮವು ವೈಜ್ಞಾನಿಕ ಜಾಗ್ರತಿ ವರ್ಷದ ಪರವಾಗಿ ನಡೆಯಿತು. ಭಾಲ್ಕಿಯಲ್ಲಿ ಶಾಸಕ ಪ್ರಕಾಶ್ ಖಾಂಡ್ರೆ ಅವರು ಉದ್ಘಾಟಿಸಿದರು. ಬೀದರ್, ಔರಾದ, ಹುಮನಾಬಾದ್ ಮುಂತಾದ ಸ್ಥಳಗಳಲ್ಲಿ ಈ ಕಾರ್ಯಕ್ರಮ ನಡೆಯಿತು.
2. 9-9-2004ರಂದು ಪರಿಸರ, ಜೀವಿ ವೈವಿಧ್ಯತೆ ಹಾಗೂ ಸಂರಕ್ಷಣೆ ಬಗ್ಗೆ ಉಪನ್ಯಾಸ ಕಾರ್ಯಕ್ರಮ, ಇದಲ್ಲದೆ ಜೈವಿಕ ತಂತ್ರಜ್ಞಾನ, ಸಸಿ ನೆಡುವ ಕಾರ್ಯಕ್ರಮ, ಪಕ್ಷಿ ವೀಕ್ಷಣೆ, ಮಳೆ ನೀರು ಸಂಗ್ರಹಣೆ, ಕಾರ್ಯಕ್ರಮಗಳನ್ನು ಜಿಲ್ಲೆಯ ವೈಜ್ಞಾನಿಕ ಜಾಗ್ರತಿ ವರ್ಷ ಸಮಿತಿ ಹಮ್ಮಿಕೊಂಡು ನಡೆಸಲಾಯಿತು.

# ಬೆಂಗಳೂರು ಜಿಲ್ಲೆ

ಬೆಂಗಳೂರು ಜಿಲ್ಲೆಯಲ್ಲಿ ವೈಜ್ಞಾನಿಕ ಜಾಗ್ರತಿ ವರ್ಷ 2004ರ ಕಾರ್ಯಕ್ರಮಗಳು :

1. ವಿಜ್ಞಾನೋತ್ಸವ 1-7-2004 ರಿಂದ 31-7-2004ರವರೆಗೆ ಉಪನ್ಯಾಸಗಳು, ವಿಜ್ಞಾನ ಚಲನ ಚಿತ್ರ ಪ್ರದರ್ಶನಗಳು, ಖ್ಯಾತ ವಿಜ್ಞಾನಿಗಳು ಮತ್ತು ತಂತ್ರಜ್ಞರಿಂದ ಉಪನ್ಯಾಸಗಳು.
2. 30-7-2004ರಂದು ಮಳೆನೀರು ಕೊಯ್ಲಿನ ಬಗೆಗೆ ತಾವರೆಕೆರೆಯಲ್ಲಿ ಕಾರ್ಯಕ್ರಮ.
3. 31-7-2004ರಂದು ಕ್ಲೋನಿಂಗ್ ಮತ್ತು ಜೈವಿಕ ತಂತ್ರಜ್ಞಾನದ ಬಗೆಗೆ ವಿದ್ಯಾರ್ಥಿಗಳಿಗೆ ಕಾರ್ಯಾಗಾರ.
4. 3-8-2004ರಂದು ವೈಜ್ಞಾನಿಕ ಜಾಗ್ರತಿಯ ಬಗೆಗೆ ಸಾರ್ವಜನಿಕರೊಡನೆ ಸಂವಾದ ಕಾರ್ಯಕ್ರಮ.
5. ಆಗಸ್ಟ್ 2004 ಅಖಿಲ ಕರ್ನಾಟಕ ವೈಜ್ಞಾನಿಕ ಮಾಡೆಲ್‌ಗಳ ಸ್ಪರ್ಧೆ.

# ಬೆಳಗಾಂವಿ ಜಿಲ್ಲೆ

1. ವೈಜ್ಞಾನಿಕ ಜಾಗ್ರತಿ ವರ್ಷ 2004ರ ಅಂಗವಾಗಿ 10-9-2004ರಂದು ಪಠ್ಯಾಧಾರಿತ ಶೈಕ್ಷಣಿಕ ಕಾರ್ಯಕ್ರಮದ ಬಗೆಗೆ ಚರ್ಚೆ ನಡೆಯಿತು.
2. 24-9-2004ರಂದು ವಿಜ್ಞಾನ ಗೋಷ್ಠಿ ಹಾಗೂ ಸನ್ಮಾನ ಸಮಾರಂಭವು ನಡೆಯಿತು.

# ಮಂಡ್ಯ ಜಿಲ್ಲೆ

ಮಂಡ್ಯ ಜಿಲ್ಲೆಯಲ್ಲಿ 5-6-2004ರಂದು ರೋಟರಿ ಅಧ್ಯಕ್ಷ ಸೂರಜ್ ಎಂ. ರಂಗಯ್ಯ ಅವರು ಸಸಿ ನೆಡುವುದರ ಮೂಲಕ ವಿಶ್ವ ಪರಿಸರ ದಿನಾಚರಣೆ ಹಾಗೂ ವೈಜ್ಞಾನಿಕ ಜಾಗ್ರತಿ ವರ್ಷ-2004 ಇವುಗಳ ಉದ್ಘಾಟನೆಯನ್ನು ಮಾಡಿದರು. ನೀರು ಜೀವನ ಸಂಜೀವಿನಿ , ಕಾರ್ಯಕ್ರಮವನ್ನು ಅಂದು ನಡೆಸಲಾಯಿತು.

ದಿನಾಂಕ 8-6-2004ರಂದು ಶುಕ್ರ ಸಂಕ್ರಮಣ ಕಾರ್ಯಕ್ರಮವನ್ನು ಹಮ್ಮಿಕೊಂಡು ಜನ ಸಾಮಾನ್ಯರು, ಮಕ್ಕಳಲ್ಲಿ ಈ ಬಗೆಗೆ ಪರಿಚಯ ಮಾಡಿಕೊಡಲಾಯಿತು.

ದಿನಾಂಕ 6-7-2004 ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿ ನೀಡಿ ವೈಜ್ಞಾನಿಕ ಜಾಗ್ರತಿ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಯಿತು. ಅನಂತರ ನಡೆದ ವೈಜ್ಞಾನಿಕ ಜಾಗ್ರತಿ ವರ್ಷ 2004ರ ಕಾರ್ಯಕ್ರಮಗಳು ಹೀಗಿವೆ.

ಅ. 15-7-2004ರಂದು ತಾಲ್ಲೂಕು ಸಂಚಾಲಕರಿಗೆ ಆರೋಗ್ಯ ಮತ್ತು ಪೌಷ್ಟಿಕತೆ ಬಗೆಗೆ ಕಾರ್ಯಕ್ರಮ.

ಆ. 24-7-2004ರಂದು ಮಳೆ ನೀರು ಕೊಯ್ಲು ಕಾರ್ಯಕ್ರಮ-ಪ್ರಾತ್ಯಕ್ಷಿಕೆಯ ಮೂಲಕ ವಿವರಣೆ.

ಇ. 26-7-2004ರಂದು 'ಆರೋಗ್ಯ ಮತ್ತು ನೈರ್ಮಲ್ಯ'ದ ಬಗೆಗೆ ಉಪನ್ಯಾಸ.

ಈ. 30-7-2004ರಂದು 'ವೈಜ್ಞಾನಿಕ ಜಾಗ್ರತಿ ಮತ್ತು ಸಾವಯವ ಕೃಷಿ' ಬಗೆಗೆ ಸ್ಥಳೀಯ ತಜ್ಞರಿಂದ ಮಂಗಳ ಗ್ರಾಮದಲ್ಲಿ ಕಾರ್ಯಕ್ರಮ.

## ಮೈಸೂರು ಜಿಲ್ಲೆ

ಮೈಸೂರು ಜಿಲ್ಲೆಯ ಕಾರ್ಯಕ್ರಮವು ವಿಧ್ಯುಕ್ತವಾಗಿ 5-6-2004ರಂದು ಆರಂಭವಾಯಿತು. ಜೈವಿಕ ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ, ಹಾಗೂ ಜನ ವಿಜ್ಞಾನ ಚಳುವಳಿ ಕೇಂದ್ರಿತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು.

1. ಕೃಷ್ಣರಾಜ ಕ್ಷೇತ್ರದ ಶಾಸಕರು, ಶ್ರೀ ಎಂ. ಕೆ. ಸೋಮಶೇಖರ್ ಅವರು ಜಯನಗರದ ಸಭೆಯಲ್ಲಿ ಕಾರ್ಯಕ್ರಮವನ್ನು ಉದ್ಘಾಟಿಸಿದರು.
   - ಶ್ರೀ ಎಸ್. ರಾಮಪ್ರಸಾದ್, ನಿವೃತ್ತ ವಿಜ್ಞಾನ ಸಂಪಾದಕರು, ಕನ್ನಡ ವಿಶ್ವಕೋಶ ಅವರು ಪರಿಸರ ಸಂಕೀರ್ಣತೆ ಮತ್ತು ದುರ್ಬಲತೆಯ ಬಗೆಗೆ ಮಾತನಾಡಿದರು.
   - ಮೈಸೂರು ನಗರ ಪಾಲಿಕೆಯ ಆರೋಗ್ಯಾಧಿಕಾರಿಗಳು ಡಾ|| ಟಿ.ವಿ.ನಾಗರಾಜ್‌ರವರು ಸೋಮಾನಿ ಶಿಕ್ಷಣ ಸಂಸ್ಥೆಯಲ್ಲಿ ಕಾರ್ಯಕ್ರಮವನ್ನು ಉದ್ಘಾಟಿಸಿದರು.
   - ಹಿರಿಯ ಗಾಂಧಿವಾದಿ ಪ್ರೊ|| ಶ್ರೀನಿವಾಸನ್ ಅವರು ಶಾಲಾ ಆವರಣದಲ್ಲಿ ಸಸಿ ನೆಟ್ಟರು.
   - ಹಿರಿಯ ವಿಜ್ಞಾನ ಲೇಖಕರು ಪ್ರೊ. ಜೆ. ಆರ್. ಲಕ್ಷ್ಮಣ ರಾವ್ ಅವರು ಪರಿಸರ ವಿನಾಶಕ್ಕೆ ಜೀವ ವಿರೋಧಿ ಆಕ್ರಮಣವೇ ಕಾರಣವೆಂದು ಹೇಳಿದರು.

### ವಿಜ್ಞಾನ ಜಾಗ್ರತಿ ಕಾರ್ಯಕ್ರಮಗಳು

2. 1-8-04 ಪರಿಸರ ಸಾಕ್ಷರತೆ ಮತ್ತು ವೈಜ್ಞಾನಿಕ ಜಾಗ್ರತಿ ವರ್ಷದ ಧ್ಯೇಯಗಳು, ಶಿಕ್ಷಕರಿಗಾಗಿ.
3. 2-8-04 ಪರಿಸರ ಸಾಕ್ಷರತೆ, ವೈಜ್ಞಾನಿಕ ಜಾಗ್ರತಿ ವರ್ಷ ಧ್ಯೇಯಗಳು ಚಿಕ್ಕಮಗಳೂರಿನ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ.
4. 3-8-04 : ವಿಜ್ಞಾನ ಪಠ್ಯ ವಿಷಯಗಳು - ಪ್ರಾಥಮಿಕ ಶಾಲೆಯ ಮಕ್ಕಳಿಗಾಗಿ.
5. 6-8-04 : ವೈಜ್ಞಾನಿಕ ಜಾಗ್ರತಿ ವರ್ಷ ಹಾಗೂ ಜೈವಿಕ ವೈವಿಧ್ಯದ ಬಗೆಗೆ ಸುಮಾರು 300 ಜನ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗಾಗಿ ಕಾರ್ಯಕ್ರಮ.
6. 7-8-04 : ಜನಪದ ಕಲಾವಿದರಿಗೆ ಪ್ರೋತ್ಸಾಹ ನೀಡುವ ವಿಜ್ಞಾನ ಕಾರ್ಯಕ್ರಮ.
7. 9-8-04 : ವೈಜ್ಞಾನಿಕ ಜಾಗ್ರತಿ ವರ್ಷದ ಪರಿಚಯಾತ್ಮಕ ಕಾರ್ಯಕ್ರಮ - ರಾಮನಗರ ವಿದ್ಯಾರ್ಥಿಗಳಿಗೆ.
8. 12-8-04 : ವೈಜ್ಞಾನಿಕ ಜಾಗ್ರತಿ ವರ್ಷದ ಪರಿಚಯಾತ್ಮಕ ಕಾರ್ಯಕ್ರಮ - ಪ್ರೌಢಶಾಲಾ ವಿದ್ಯಾರ್ಥಿಗಳು, ಪಂಚಾಯಿತಿ ಸದಸ್ಯರು, ಮೊದಲಾದವರಿಗೆ.
9. 12-8-04 : ಪಾಲಿಟೆಕ್ನಿಕ್ ವಿದ್ಯಾರ್ಥಿಗಳಿಗಾಗಿ ವೈಜ್ಞಾನಿಕ ಜಾಗ್ರತಿ ವರ್ಷದ ಪರಿಚಯಾತ್ಮಕ ಭಾಷಣ.
10. 16-8-04 : ಜೀವ ತಂತ್ರ ಜ್ಞಾನದ ಬಗೆಗೆ ಐಓಬಿಬಿ ಕಾರ್ಯಕ್ರಮ.
11. 14-8-04 : ರೈತರಿಗಾಗಿ ಆಕಾಶವಾಣಿ ಕಾರ್ಯಕ್ರಮಗಳು, ಪರಿಸರ ಸಾಕ್ಷರತೆಯ ಬಗೆಗೆ ಕಾರ್ಯಕ್ರಮ.
12. 9-8-2004 ರಿಂದ 22-8-2004 : ಸಮಾಜದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳ ಅನ್ವಯ ವಿಶೇಷವಾಗಿ ಜೀವ ತಂತ್ರಜ್ಞಾನ ವಿದ್ಯಾರ್ಥಿಗಳಿಗಾಗಿ ನಡೆಸಲಾಯಿತು.
13. 30-8-2004 : ನವೀಕರಿಸಬಹುದಾದ ಇಂಧನ ಬಳಸಿ ಪರಿಸರ ಸ್ನೇಹೀ ಜಾಥಾ.

## ರಾಯಚೂರು




ರಾಯಚೂರು ಜಿಲ್ಲೆಯಲ್ಲಿ ವೈಜ್ಞಾನಿಕ ಜಾಗ್ರತಿ ವರ್ಷ 2004ರ ಉದ್ಘಾಟನೆಯು 15-7-2004ರಂದು ನಡೆಯಿತು. ಆರ್. ನರಸಿಂಹಮೂರ್ತಿ, ಪ್ರಾಚಾರ್ಯರು, ಎಸ್.ಆರ್.ಕೆ.ಬಿ.ಎಡ್ ಕಾಲೇಜು, ಅವರು ಇದ್ಘಾಟಿಸಿದರು.

1. ಇದಕ್ಕೆ ಮೊದಲು ವೈಜ್ಞಾನಿಕ ಜಾಗ್ರತಿ ವರ್ಷದ ಅಂಗವಾಗಿ ನಡೆದ ಶುಕ್ರ ಸಂಕ್ರಮಣ ಕಾರ್ಯಕ್ರಮದಲ್ಲಿ, ಸುಮಾರು 16000ಕ್ಕೂ ಹೆಚ್ಚು ಜನರು, ವಿದ್ಯಾರ್ಥಿಗಳು ವಿದ್ಯಮಾನವನ್ನು ವೀಕ್ಷಿಸಿದರು.
2. 10-7-2004: ಪ್ರತಿ ತಾಲೂಕಿನಲ್ಲಿ ಉಪನ್ಯಾಸ ಕಾರ್ಯಕ್ರಮ.
3. ಮಳೆ ನೀರು ಸಂಗ್ರಹಣೆ ಕಾರ್ಯಕ್ರಮ.
4. 15-7-2004 : ನೈಸರ್ಗಿಕ ಅರಿವಿನ ಬಗೆಗೆ ಸಂವಾದ.
5. 20-7-2004 : ಚಿತ್ರ ಸ್ಪರ್ಧೆ.
6. 25-7-2004 : ಸಂಶೋಧನಾಲಯಗಳಿಗೆ ಭೇಟಿ.
7. 30-7-2004 : ಪಕ್ಷಿ ವೀಕ್ಷಣೆ ಕಾರ್ಯಕ್ರಮ.
8. 10-8-2004 : ಪಕ್ಷಿ ವೀಕ್ಷಣೆ ಪ್ರಾತ್ಯಕ್ಷಿಕೆ.
9. 6-9-2004 : ಜೈವಿಕ ತಂತ್ರಜ್ಞಾನದ ಬಗೆಗೆ ನಡೆದ ಕಾರ್ಯಕ್ರಮವನ್ನು ಕರಾವಿಪದ ಅಧ್ಯಕ್ಷರು ಡಾ|| ಸ. ಜ. ನಾಗಲೋಟಿಮಠ ಅವರು ನಡೆಸಿಕೊಟ್ಟರು.
10. 11-9-2004ರಂದು ಜಾಗತೀಕರಣದಿಂದ 'ಶೈಕ್ಷಣಿಕ ಕ್ಷೇತ್ರದ ಮೇಲೆ ಪ್ರಭಾವ' ಬಗೆಗೆ ಮುಕ್ತ ಚರ್ಚೆ ನಡೆಯಿತು. ನಗರದ ಪರಿಣತರು ಇದರಲ್ಲಿ ಭಾಗವಹಿಸಿದರು.

ಲಿಂಗಸುಗೂರು

11. 16-9-2004ರಂದು ಪರಿಸರ ರಸ ಪ್ರಶ್ನೆ ಕಾರ್ಯಕ್ರಮದಲ್ಲಿ 100 ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.
12. 13-8-2004ರಂದು ಉಪನ್ಯಾಸ, ಚರ್ಚೆಗಳ ನಂತರ ಜೈವಿಕ ತಂತ್ರಜ್ಞಾನ ಭಾರತಕ್ಕೆ ಅವಶ್ಯ ಎಂಬ ನಿರ್ಣಯ ತೆಗೆದುಕೊಳ್ಳಲಾಯಿತು.
13. 17-9-2004ರಂದು ನವೀಕರಿಸಲಾಗುವ ಶಕ್ತಿಯಿಂದ ಪರಿಸರದ ಮೇಲೆ ಆಗುವ ಪರಿಣಾಮಗಳು ಎಂಬುದರ ಬಗೆಗೆ ಪ್ರಬಂಧ ಸ್ಪರ್ಧೆ.
14. 18-9-2004ರಂದು ವೈಜ್ಞಾನಿಕ ಜಾಗ್ರತಿ ವರ್ಷದ ಅಂಗವಾಗಿ ದೊಡ್ಡ ಪ್ರಮಾಣದ ಕಾರ್ಯಕ್ರಮವನ್ನು ಹಮ್ಮಿ ಕೊಳ್ಳಲಾಯಿತು. ಪಕ್ಷಿ ವೀಕ್ಷಣೆ, ಜೈವಿಕ ತಂತ್ರಜ್ಞಾನದ ಬಗೆಗೆ ಸ್ಪರ್ಧೆಗಳು ನಡೆದುವು. 400 ವಿದ್ಯಾರ್ಥಿಗಳು ಭಾಗವಹಿಸಿದ್ದರು.
15. 18-9-2004ರಂದು ಪರಿಸರ ತಿರುಗಾಟ ಕಾರ್ಯಕ್ರಮದಲ್ಲಿ 150 ವಿದ್ಯಾರ್ಥಿಗಳು ಭಾಗವಹಿಸಿದ್ದರು.
16. 23-9-2004ರಂದು ಪವಾಡ ಬಯಲು ಕಾರ್ಯಕ್ರಮದಲ್ಲಿ ಸುಮಾರು 1000 ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.
17. 23-9-2004ರಂದು ಜೈವಿಕ ತಂತ್ರಜ್ಞಾನ ಮತ್ತು ಪರಿಸರ ವಿಕೋಪಗಳ ಬಗೆಗೆ ಕಾರ್ಯಕ್ರಮಗಳು ನಡೆದುವು.

## ಶಿವಮೊಗ್ಗ ಜಿಲ್ಲೆ





ಜಿಲ್ಲಾ ಸಮಿತಿಯು ಮೇ 2004ರಲ್ಲಿ ರಚಿತವಾಗಿ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಕಾರ್ಯ ನಿರ್ವಾಹಕರು, ಪದವಿ ಪೂರ್ವ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ, ವಾರ್ತಾಧಿಕಾರಿಗಳು, ಸಂಬಂಧಿತ ಅಧಿಕಾರಿಗಳನ್ನೊಳಗೊಂಡ ಸಮಿತಿಯನ್ನು ರಚಿಸಿ ಕಾರ್ಯ ಯೋಜನೆಯನ್ನು ತಯಾರಿಸಲಾಯಿತು.

1. ವಿಶ್ವ ಪರಿಸರ ದಿನವನ್ನು 5-6-2004ರಂದು ವೈಜ್ಞಾನಿಕ ಜಾಗ್ರತಿ ವರ್ಷ - 2004ರ ಅಂಗವಾಗಿ, ಆಚರಿಸಲಾಯಿತು. ಕಾರ್ಯಕ್ರಮವನ್ನು ಶ್ರೀ ಹೆಚ್. ಎಸ್. ರತ್ನಾಕರ್, ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯಿತಿ, ಶಿವಮೊಗ್ಗ ಜಿಲ್ಲೆ ಅವರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ 135 ಜನ ಪ್ರತಿಯೊಬ್ಬರೂ ಒಂದೊಂದು ಸಸಿ ನೆಟ್ಟರು. ಸಸ್ಯ ಸಾಮ್ರಾಜ್ಯದಿಂದ ಮೋಡ ಕಟ್ಟುವುದು, ಮಳೆ ಬೀಳುವುದು ಮುಂತಾದವು ನೀರಿನ ಚಕ್ರೀಯ ಕ್ರಿಯೆಗೆ ಯಾವ ಬಗೆಯಲ್ಲಿ ನೆರವಾಗುತ್ತವೆ ಎಂಬುದರ ಬಗೆಗೆ ಮನದಟ್ಟು ಮಾಡಿಕೊಡಲಾಯಿತು.
2. ಇದಕ್ಕೆ ಮುಂಚಿತವಾಗಿ 25-4-2004ರಂದು ಪರಿಸರ ನಿರ್ವಹಣೆಗೆ ಒತ್ತು ಕೊಟ್ಟು ನಡೆಸಿದ ಕಾರ್ಯಕ್ರಮದಲ್ಲಿ ತೆರೆದ ಚರಂಡಿಗಳು, ಅಸಮರ್ಪಕ ನೈರ್ಮಲ್ಯ ವ್ಯವಸ್ಥೆ ಪ್ಲಾಸ್ಟಿಕ್ ಕಸ ಹಾಗೂ ಪಾರ್ಥೇನಿಯಂಗಳ ಬಗೆಗಿನ ಕಾರ್ಯಕ್ರಮವನ್ನು ಶಿವಮೊಗ್ಗ ಜಿಲ್ಲೆಯ ಶಾಸಕರಾದ ಶ್ರೀ ಕೆ.ಎಸ್.ಈಶ್ವರಪ್ಪ ಉದ್ಘಾಟಿಸಿದರು. ಸುಮಾರು ನೂರೆಂಭತ್ತು ಸಾಕ್ಷರತಾ ಸೇವಕರು ಮತ್ತು ಸಹಾಯಕ ಪ್ರೇರಕರು ಸೇರಿ ನಾಲ್ಕು ತಂಡದಲ್ಲಿ ಪಾರ್ಥೇನಿಯಂ ನಿರ್ಮೂಲನಾ ಕಾರ್ಯದಲ್ಲಿ ಭಾಗವಹಿಸಿದರು. ವನಮಹೋತ್ಸವ ಕಾರ್ಯಕ್ರಮವನ್ನು 9-8-2004ರಂದು ಜಿಲ್ಲಾ ಪಂಚಾಯಿತಿ ಸದಸ್ಯೆ ಶ್ರೀಯುತ ಗೀತಾ ತಿರುಕುಪ್ಪ ಅವರು ಉದ್ಘಾಟಿಸಿದರು.
3. ಜಿಲ್ಲೆಯ ಹೆಸರಾಂತ ಪಕ್ಷಿಧಾಮಗಳಲ್ಲಿ ಒಂದಾದ ಮಂಡಗದ್ದೆಯಲ್ಲಿ ಹಿನ್ನೀರು ಸಂಗ್ರಹ ಹೆಚ್ಚಾಗಿ ಬಿಕ್ಕಟ್ಟು ಒದಗಿದೆ. ಇದರಿಂದ ವಲಸೆ ಹಕ್ಕಿಗಳು ಹೆಚ್ಚು ಸಂಖ್ಯೆಯಲ್ಲಿ ಬಂದು ತಂಗಲು ಅಡ್ಡಿಯಾಗಬಹುದು. ಈ ಬಗೆಗೆ ಮಾಹಿತಿ ಒದಗಿಸಿ, ವಿದ್ಯಾರ್ಥಿಗಳು, ಶಿಕ್ಷಕರು, ಜನಸಾಮಾನ್ಯರನ್ನು ತೊಡಗಿಸಿಕೊಂಡು ಸಮೂಹ ಮಾಧ್ಯಮದ ಮೂಲಕ ಈ ಪಕ್ಷಿಧಾಮದ ಸುಧಾರಣೆಗೆ ಹೆಚ್ಚು ಧನ ಮೀಸಲಿಡಬೇಕೆಂದು ಸರಕಾರವನ್ನು ಕೋರಲಾಗಿದೆ.
4. 24-7-2004ರಂದು ಶರಾವತಿ ನದಿಯ ಜಲಪಾತ ಜೋಗದಲ್ಲಿನ ಸಸ್ಯ, ಪ್ರಾಣಿ, ಪಕ್ಷಿಗಳ ಬಗ್ಗೆ ಪ್ರಾಸ್ತಾವಿಕ ಮಾಹಿತಿಕೊಟ್ಟು ಅದನ್ನು ಆಧರಿಸಿ ಚಿತ್ರಕಲಾ ಸ್ಪರ್ಧೆಯನ್ನು ಶಾಲಾ ಮಕ್ಕಳಿಗೂ ಏರ್ಪಡಿಸಲಾಗಿತ್ತು. ಮತ್ತೆ 25-8-2004ರಂದು ನಿದಿಗೆ ಊರಿನ ಶಾಲಾ ಮಕ್ಕಳನ್ನು ಅಲಂಕಾರಿಕ ಸಸ್ಯಗಳು ಮತ್ತು ಅಡಿಗೆ ಮನೆ ಕೈತೋಟದ ಪರಿಚಯಕ್ಕಾಗಿ ಅನ್ನಪೂರ್ಣೇಶ್ವರಿ ನರ್ಸರಿಗೆ ಕರೆದೊಯ್ಯಲಾಯಿತು. ಹಸಿರು ಮನೆ ಪರಿಣಾಮ, ಹಣ್ಣಿನ ಗಿಡಗಳು, ಕ್ಯಾಕ್ಟಸ್‌ಗಳು, ಹೂವಿನ ಗಿಡಗಳು, ಹುಲ್ಲುಗಳು, ಮುಂತಾದವುಗಳ ಪರಿಚಯ ಮಾಡಿಸಿ ಅದರ ಬಗೆಗೆ ಪ್ರಬಂಧ ಸ್ಪರ್ಧೆ ನಡೆಸಲಾಯಿತು.
5. ಜುಲೈ ಅಂತ್ಯದಲ್ಲಿ 4 ದಿನಗಳ ಕಾಲ (27-31.7.2004) ಕಾರ್ಯಕ್ರಮ ನಡೆಯಿತು. 27-7-2004ರಂದು ಸಾಗರದಲ್ಲಿ ಮಳೆನೀರು ಕೊಯ್ಲಿನ ಬಗೆಗೆ 60 ಮಂದಿ ಕೃಷಿಕರಿಗೆ ಒಂದು ಕಮ್ಮಟ ನಡೆಸಲಾಯಿತು.
6. ಕುವೆಂಪು ವಿಶ್ವವಿದ್ಯಾನಿಲಯದಲ್ಲಿ 31-7-2004ರಂದು 145 ಮಂದಿಗೆ 'ನೀರು ಜೀವನ ಸಂಜೀವಿನಿ' ಕಮ್ಮಟ ನಡೆಸಲಾಯಿತು. ಪ್ರೊ. ಚಿದಾನಂದ ಗೌಡ, ಕುಲಪತಿಗಳು, ಕುವೆಂಪು ವಿಶ್ವವಿದ್ಯಾನಿಲಯ ಅಧ್ಯಕ್ಷತೆ ವಹಿಸಿದರು. ಅನಂತರ ಭದ್ರಾವತಿಯಲ್ಲಿ 165

ಮಂದಿಯನ್ನು ಒಳಗೊಂಡು ಶಿಕ್ಷಕರು, ಪೋಷಕರು, ಮುಂತಾದವರು ಭಾಗವಹಿಸಿದ್ದರು. ಜಲ ಸಾಕ್ಷರತೆಯ ಬಗೆಗೆ ಗ್ರಾಮೀಣ ಜನರು ಭಾಗವಹಿಸಿ, ಮಳೆನೀರು ಕ್ಲಬ್‌ಗಳನ್ನು ಆರಂಭಿಸುವುದಾಗಿ ಆಶ್ವಾಸನೆ ಕೊಟ್ಟರು.

7. 3-8-2004ರಂದು ನಿಂಬೆಗೊಂದಿಯಲ್ಲಿ ಸಾರ್ವಜನಿಕರಿಗೆ ಸಾಕ್ಷರತೆ ಮತ್ತು ಜಲಸಾಕ್ಷರತೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.
8. 22-8-2004ರಂದು ಎನ್.ಎಸ್.ಎಸ್. ಶಿಬಿರದಲ್ಲಿ ಜಲ ಸಾಕ್ಷರತಾ ಜಾಥಾ ನಡೆಯಿತು.
9. 5-9-2004ರಂದು ಕೆಇಬಿ ನಿವೃತ್ತ ನೌಕರರ ಸಂಘದಲ್ಲಿ ಸೂರು ನೀರು ಸಂಗ್ರಹಣೆಯ ಬಗೆಗೆ ಕಾರ್ಯಕ್ರಮ ನಡೆಸಿ ನೀರಿನ ಮಿತವ್ಯಯದ ವಿಷಯವನ್ನು ಪರಿಚಯಿಸಲಾಯಿತು.
10. 9-9-2004ರಂದು ಆಶುಭಾಷಣ ಸ್ಪರ್ಧೆ ವಿಷಯ ಜಲ ಸಂರಕ್ಷಣೆ 250 ವಿದ್ಯಾರ್ಥಿಗಳು ಹಾಜರಿದ್ದರು.
11. 11-9-2004ರಂದು ಶಿವಮೊಗ್ಗದಲ್ಲಿ ಕಾಲೇಜು ವಿದ್ಯಾರ್ಥಿನಿಯರಿಗೆ ನೀರಿನ ಬಗ್ಗೆ ರಸಪ್ರಶ್ನೆ ಕಾರ್ಯಕ್ರಮ ನಡೆಯಿತು. 200 ವಿದ್ಯಾರ್ಥಿನಿಯರು ಹಾಜರಿದ್ದರು.
12. 13-9-2004ರಂದು ಮಳೆಕೊಯ್ಲು ಎಂದರೇನು ಎಂಬ ವಿಷಯವಾಗಿ ಪ್ರಬಂಧ ಸ್ಪರ್ಧೆ ನಡೆಸಲಾಯಿತು.
13. 14-9-2004ರಂದು ಜಲ ಸಾಕ್ಷರತೆಯ ಬಗೆಗೆ ಪ್ರಹಸನಗಳ ಮೂಲಕ 500 ಮಂದಿ ವಿದ್ಯಾರ್ಥಿನಿಯರಿಗೆ ಕಾರ್ಯಕ್ರಮದ ಪ್ರದರ್ಶನ ನಡೆಯಿತು.
14. 28-9-2004ರಂದು ಮಹಿಳೆ ಮತ್ತು ನೀರು ವಿಷಯದ ಬಗೆಗೆ ಭಾಷಣ ಸ್ಪರ್ಧೆ ನಡೆಯಿತು.
15. ಇದಲ್ಲದೆ ಶುಕ್ರ ಸಂಕ್ರಮಣ (8-6-2004) ಮತ್ತು ಆರೋಗ್ಯ ಕಾರ್ಯಕ್ರಮ (6-8-04)ಗಳು ನಡೆದುವು.
16. 3-9-2004ರಿಂದ 13-9-2004 ರವರೆಗೆ ಸಂಚಾರಿ ವಸ್ತು ಪ್ರದರ್ಶನವು 25 ಪ್ರೌಢ ಶಾಲೆಗಳಲ್ಲಿ ನಡೆಯಿತು.

ಆಗಸ್ಟಿನಲ್ಲಿ 25 ಕಾಲರಾ ರೋಗಿಗಳನ್ನು ಚಿಕಿತ್ಸೆಗೆ ಒಳಪಡಿಸಿದ ಸಂದರ್ಭದಲ್ಲಿ ವೈಜ್ಞಾನಿಕ ಜಾಗ್ರತಿ ವರ್ಷ - 2004ರ ಅಂಗವಾಗಿ ಈ ರೋಗದ ಬಗೆಗೆ ವ್ಯಾಪಕವಾಗಿ ಮಾಹಿತಿ ಪ್ರಚಾರ ಕಾರ್ಯಕ್ರಮವನ್ನು ಕೈಗೊಂಡು ಗ್ರಾಮಸ್ಥರಿಗೆ ನಿವಾರಣೆಯೋಪಾಯಗಳನ್ನು ತಿಳಿಸಿ ಕೊಡಲಾಯಿತು. 9-8-2004ರಂದು ಮೂಢನಂಬಿಕೆಗಳು ಹಾಗೂ ಪವಾಡ ರಹಸ್ಯ ಗಳ ಬಗೆಗೆ ಕಾರ್ಯಕ್ರಮ ನಡೆಯಿತು.

## ಹಾವೇರಿ ಜಿಲ್ಲೆ

ಹಾವೇರಿ ಜಿಲ್ಲೆಯಲ್ಲಿ ವೈಜ್ಞಾನಿಕ ಜಾಗ್ರತಿ ವರ್ಷ 2004ರ ಅಂಗವಾಗಿ ನಡೆದ ಕಾರ್ಯಕ್ರಮಗಳು :

1. 8-6-2004ರಂದು ಶುಕ್ರ ಸಂಕ್ರಮಣ ಕಾರ್ಯಕ್ರಮ ನಡೆಯಿತು. ಸಹಸ್ರಾರು ಜನ ವೀಕ್ಷಿಸಿದರು.
2. 20-7-2004ರಂದು ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮವನ್ನು ನಡೆಸಲಾಯಿತು.
3. 20-7-2004 ಮಳೆ ಕೊಯ್ಲು ಕಾರ್ಯಾಗಾರವು ಹಾವೇರಿಯ ಎಲ್ಲ ತಾಲ್ಲೂಕುಗಳ ಶಿಕ್ಷಕರು, ಸ್ವಯಂ ಸೇವಕರು, ಯುವಜನರಿಗಾಗಿ ನಡೆಯಿತು.
4. ಪರಿಸರ ಪಯಣ - 300 ಮಕ್ಕಳು ಗುಡ್ಡದ ಮೇಲೆ ಲಕ್ಷ ಬೀಜವನ್ನು ಬಿತ್ತಿ ಬಂದರು.
5. 20-8-2004 : ನವೀಕರಿಸುವ ಇಂಧನಗಳ ವ್ಯಾಪ್ತಿ, ಬಳಕೆಗಳ ತುರ್ತು ಅಗತ್ಯತೆ ಬಗೆಗೆ ಕಾರ್ಯ ಶಿಬಿರ ನಡೆಯಿತು.
6. 17-8-2004 : ಜಿಲ್ಲಾ ಮಟ್ಟದ ವಿಜ್ಞಾನ ಗೋಷ್ಠಿಯು ನಡೆಯಿತು.
7. 18-8-2004 : ಜಿಲ್ಲಾ ಮಟ್ಟದ ರಸಪ್ರಶ್ನೆ - ಏಳು ತಾಲ್ಲೂಕುಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.
8. 23-8-2004 : ವಾಯು ಮಾಲಿನ್ಯ ಕುರಿತು ಚಿತ್ರಕಲೆ ಸ್ಪರ್ಧೆ ನಡೆಯಿತು.
9. 28-8-2004 : ಪವಾಡ ರಹಸ್ಯ ಬಯಲು ಕಾರ್ಯಕ್ರಮವು ಗಾಂಧಿ ಗ್ರಾಮೀಣ ಗುರುಕುಲದಲ್ಲಿ ನಡೆಯಿತು.
10. 30-8-2004 : ವಿಜ್ಞಾನ ಜಾಥಾ - ಬೀದಿನಾಟಕ, ರೂಪಕ, ಪವಾಡ ಹಾಗೂ ರಹಸ್ಯ ಬಯಲು ಕಾರ್ಯಕ್ರಮದಲ್ಲಿ ಸಹಸ್ರಾರು ಮಂದಿ ಭಾಗವಹಿಸಿದ್ದರು.
11. 1-9-2004 : ವಿಜ್ಞಾನಿಗಳ ಚಿತ್ರ ಬರೆಯುವ ಸ್ಪರ್ಧೆ.
12. 4-9-2004 : ಶೈಕ್ಷಣಿಕ ಸಂದರ್ಶನ ಕಾರ್ಯಕ್ರಮ.

## ಗದಗ

15. ಪ್ರೊ. ಸಂಕನೂರ ಎಸ್.ವಿ
ಫೋನ್ : 539583 (ಮನೆ)
ಮೊಬೈಲ್ : 94483 01983

## ಧಾರವಾಡ

16. ಶ್ರೀ ವೈ. ಬಿ. ಗುರಣ್ಣವರ
ಫೋನ್ : 08304-700221

## ಹಾವೇರಿ

17. ಶ್ರೀ. ಆರ್. ಎಸ್. ಪಾಟೀಲ್
ಫೋನ್ : 08375 887536

## ಬೀದರ್

18. ಪ್ರೊ. ಅನಿಲಕುಮಾರ್ ಅಣದೂರ
ಫೋನ್ : 08482-229983(ಮನೆ)
ಮೊಬೈಲ್ : 98442 05526

## ಬಾಗಲಕೋಟೆ

19. ಪ್ರೊ. ಸಿ. ಜಿ. ಹವಾಲ್ದಾರ್
ಫೋನ್ : 08351 260224 (ಕ)
260046 (ಮನೆ)

## ಕೊಡಗು

20. ಶ್ರೀ ಆರ್. ಎಸ್. ದೊಡ್ಡಣ್ಣ
ಮೊಬೈಲ್ : 94484 78202

## ಚಿಕ್ಕಮಗಳೂರು

21. ಶ್ರೀ ಮಂಜುನಾಥ್ ಸಿ.ಇ.
ಫೋನ್ : ಶಾಲೆ : 222228
231117 (ಮನೆ)

## ಗುಲಬರ್ಗಾ

22. ಶ್ರೀ ಎಚ್. ಸಿ. ಪಾಟೀಲ್
ಫೋನ್ : 460290 (ಮನೆ)

## ಶಿವಮೊಗ್ಗ

23. ಶ್ರೀ ಶೇಖರ್ ಗೌಳೇರ್
ಫೋನ್ : 08182 224125(ಕ)
255690(ಮನೆ)

## ಚಾಮರಾಜನಗರ

24. ಡಾ. ಆರ್. ಎಸ್. ನಾಗಾರ್ಜುನ
ಫೋನ್ : 0821-722269
ಮೊಬೈಲ್ : 94480 34287

## ಬೆಳಗಾವಿ

25. ಡಾ. ಮಿಸಾಳೆ
ಫೋನ್ : 0831 2470832

## ದಾವಣಗೆರೆ

26. ಶ್ರೀ ಎಂ. ಎನ್. ಮುಸ್ಟೂರಪ್ಪ

## ಬಿಜಾಪುರ

27. ಶ್ರೀ ಎಂ. ಎಸ್. ಕೊಟ್ಲ
ಫೋನ್ : 08358-844221 (ಮನೆ)

## ದಕ್ಷಿಣ ಕನ್ನಡ

28. ಡಾ. ಕೆ. ವಿ. ರಾವ್
ಫೋನ್ : 0824-211137 (ಮನೆ)

## ಉತ್ತರ ಕನ್ನಡ

29. ಡಾ. ವಿ. ಎನ್. ನಾಯಕ್
ಫೋನ್ : 08382-226160 (ಮನೆ)

## ಉಡುಪಿ

30. ಶ್ರೀ ದಿನೇಶ್ ಶೆಟ್ಟಿಗಾರ್
ಫೋನ್ : 0820-771102 (ಕ)
544697 (ಮನೆ)

## ವೈಜ್ಞಾನಿಕ ಜಾಗ್ರತಿ ವರ್ಷ-2004 ಎಲ್ಲರ ಹೊಸ್ತಿಲಲ್ಲಿ

ಜನಜೀವನದ ಉತ್ತಮೀಕರಣಕ್ಕೆ ವಿಜ್ಞಾನ ಮತ್ತು ತಂತ್ರಜ್ಞಾನಗಳು ಜನ ಸಾಮಾನ್ಯರಲ್ಲಿ ನೆಲೆಗೊಳ್ಳಬೇಕು ಎಂಬುದಕ್ಕಾಗಿ **ವೈಜ್ಞಾನಿಕ ಜಾಗ್ರತಿ ವರ್ಷ-2004** ಎಂಬ ಕಲ್ಪನೆಯನ್ನು ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯವು ರೂಪಿಸಿ, 2004ರಲ್ಲಿ ವರ್ಷದುದ್ದಕ್ಕೂ ಭಾರತದಾದ್ಯಂತ, ಎಲ್ಲ ಸ್ತರದ, ಎಲ್ಲ ಕ್ಷೇತ್ರಗಳ ಜನರನ್ನು ತಲುಪುವ ಒಂದು ಆಂದೋಲನದಂತಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ನಿರ್ಧರಿಸಿತು. ಈ ಕಾರ್ಯಕ್ರಮಗಳು ಸಂಕೀರ್ಣ ರೀತಿಯವು. ದೇಶದಲ್ಲಿ ಪರಿಸುಮಾರು ಸಾರ್ವತ್ರಿಕ ಅನ್ವಯವಿರುವ ಆರು ವಿಶಿಷ್ಟ ವಿಷಯಗಳ ಬಗೆಗಿನ ಪ್ರಾತ್ಯಕ್ಷಿಕೆ, ಉಪನ್ಯಾಸ, ಕಾರ್ಯತಃ ಮಾಡಿ ನೋಡಬಹುದಾದ ಚಟುವಟಿಕೆಗಳು ಮತ್ತು ಜಾಥಾಗಳಲ್ಲಿ ಸಾಂಪ್ರದಾಯಿಕ ಹಾಗೂ ಆಧುನಿಕ ಸಂವಹನ ವಿಧಾನಗಳನ್ನು ಮೇಳೈಸಿ, ಇಡೀ ದೇಶದಲ್ಲಿ ಅಲೆಯೋಪಾದಿಯಲ್ಲಿ **ವೈಜ್ಞಾನಿಕ ಜಾಗ್ರತಿ ವರ್ಷ-2004**ರ ಕಾರ್ಯಕ್ರಮಗಳು ನಡೆಯುತ್ತಲಿವೆ.

ಕರ್ನಾಟಕದಲ್ಲಿ ನಡೆಯುತ್ತಿರುವ ವೈಜ್ಞಾನಿಕ ಜಾಗ್ರತಿ ವರ್ಷ-2004ರ ಮೊದಲನೇ ಹಂತದ ಚಟುವಟಿಕೆಗಳ ಒಂದು ವಿಹಂಗಮ ನೋಟ ಈ ವಾರ್ತಾ ಪತ್ರದಲ್ಲಿದೆ.




ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ವಿಜ್ಞಾನ ಭವನ ಶಂಕುಸ್ಥಾಪನೆಯನ್ನು
ನೆರವೇರಿಸಿದ ಸನ್ಮಾನ್ಯ ಶ್ರೀ.ಎಸ್.ಎಂ.ಕೃಷ್ಣ,, ಮುಖ್ಯ ಮಂತ್ರಿಗಳು, ಕರ್ನಾಟಕ ಸರ್ಕಾರ
ಚಿತ್ರದಲ್ಲಿ (ಎಡದಿಂದ-ಬಲಕ್ಕೆ)
ಕರಾವಿಪದ ಗೌರವ ಕಾರ್ಯದರ್ಶಿಯವರಾದ ಡಾ.ಎಚ್.ಎಸ್.ನಿರಂಜನ ಆರಾಧ್ಯ
ಮಹಾಪೋಷಕರಾದ ಡಾ.ಎಚ್.ನರಸಿಂಹಯ್ಯನವರು, ಶ್ರೀಮತಿ.ನಫೀಸ್ ಫಜಲ್, ವಿಜ್ಞಾನ ಮತ್ತು
ತಂತ್ರಜ್ಞಾನ ಇಲಾಖೆ ರಾಜ್ಯ ಸಚಿವರು ಮತ್ತು ಕರಾವಿಪದ ಅಧ್ಯಕ್ಷರಾದ ಡಾ.ಸ.ಜ.ನಾಗಲೋಟಿಮಠ
ಅವರನ್ನು ಕಾಣಬಹುದು

## 23ನೇ ವಾರ್ಷಿಕ ಮಹಾಸಭೆಯ ಕಾರ್ಯಸೂಚಿ
## ಮತ್ತು
## 2003-2004ನೇ ಸಾಲಿನ ಸಾಂಸ್ಥಿಕ ಕಾರ್ಯಚಟುವಟಿಕೆಗಳ ಮತ್ತು
## ಲೆಕ್ಕ ಪತ್ರ ಸಾರಾಂಶ ವರದಿ

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು
ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್ ಆವರಣ, ಬೆಂಗಳೂರು - 560 012

# ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಆವರಣ, ಬೆಂಗಳೂರು - 560 012

ಕರಾವಿಪ ಸಂಖ್ಯೆ : 1.5/ವಾ.ಮ.ಸ/1056 ದಿನಾಂಕ : 25-11-2004

ಮಾನ್ಯ ಅಧ್ಯಕ್ಷರು, ಸದಸ್ಯರು, ಕಾರ್ಯಕಾರಿ ಸಮಿತಿ
ದಾನಿ ಸದಸ್ಯರು, ದಾನಿ ಸಂಸ್ಥೆಗಳ ಪ್ರತಿನಿಧಿಗಳು
ಘಟಕ ಸಂಚಾಲಕರು, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು

**ಸುತ್ತೋಲೆ**

**ವಿಷಯ** : ದಿನಾಂಕ **3-12-2004ರ ಶುಕ್ರವಾರ ಬೆಳಿಗ್ಗೆ 11-00 ಗಂಟೆಗೆ** ಶ್ಯಾಮನೂರು ಶಿವಶಂಕರಪ್ಪ ಪಾರ್ವತಮ್ಮ ಕಲ್ಯಾಣ ಮಂಟಪ, ಅನುಭವ ಮಂಟಪ ಆವರಣ, ಹದಡಿ ರಸ್ತೆ, ದಾವಣಗೆರೆ - 577 005 ಇಲ್ಲಿ ಜರುಗುವ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ 23ನೆಯ 2003-2004ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯ ಕುರಿತು.

**ಉಲ್ಲೇಖ** : ಈ ಕಚೇರಿಯ ಸುತ್ತೋಲೆ ಕ್ರಮಾಂಕ : 1.5/ವಾ.ಮ.ಸ/1037, ದಿನಾಂಕ : 5-11-2004

-------

**ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ 23ನೆಯ 2003-2004ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ 3-12-2004ರ ಶುಕ್ರವಾರ ಬೆಳಿಗ್ಗೆ 11-00 ಗಂಟೆಗೆ ಕರೆಯಲಾದಂತೆ, ಸಭೆಯ ಕಾರ್ಯಸೂಚಿಯನ್ನು ರವಾನಿಸಿದೆ. ಸ್ವೀಕೃತಿಯನ್ನು ಮರುಟಪಾಲಿನಲ್ಲಿ ದಯವಿಟ್ಟು ಸಲ್ಲಿಸುವುದು.** ಮಾನ್ಯ ಸದಸ್ಯರು ತಾವು ಚರ್ಚಿಸಬಯಸುವ ವಿಷಯಗಳನ್ನು ಲಿಖಿತವಾಗಿ ಈ ಕೆಳಗೆ ಸಹಿ ಮಾಡಿದವರಿಗೆ **ದಿ.29-11-2004ರೊಳಗೆ ಸಲ್ಲಿಸಲು ವಿನಂತಿಸಿದೆ.**

**ತಾವು ಈ ಸಭೆಗೆ ಹಾಜರಾಗಿ ವಾರ್ಷಿಕ ಮಹಾಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ವಿನಂತಿಸಿದೆ.**

ವಂದನೆಗಳು,

ಇತಿ ವಿಶ್ವಾಸದ,

(ಡಾ.ಎಚ್.ಎಸ್.ನಿರಂಜನ ಆರಾಧ್ಯ)
ಗೌರವ ಕಾರ್ಯದರ್ಶಿ.

# ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು

ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್ ಆವರಣ, ಬೆಂಗಳೂರು - 560 012

***ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ 23ನೆಯ 2003-2004ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯ ಕಾರ್ಯಸೂಚಿ***

*ದಿನಾಂಕ : 3-12-2004, ಬೆಳಿಗ್ಗೆ : 11-00 ಗಂಟೆಗೆ*

*ಸ್ಥಳ : ಶ್ಯಾಮನೂರು ಶಿವಶಂಕರಪ್ಪ ಪಾರ್ವತಮ್ಮ ಕಲ್ಯಾಣ ಮಂಟಪ, ದಾವಣಗೆರೆ*

1. **ಸ್ವಾಗತ :** ಡಾ.ಸ.ಜ.ನಾಗಲೋಟಿಮಠ, ಅಧ್ಯಕ್ಷರು, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು

***2. ಡಾ.ಎಚ್.ಎಸ್.ನಿರಂಜನ ಆರಾಧ್ಯ, ಗೌರವ ಕಾರ್ಯದರ್ಶಿ, ಕರಾವಿಪ ಇವರಿಂದ ವರದಿ:***

2.1 ದಿನಾಂಕ 2003ರ ಡಿಸೆಂಬರ್ 2ರಂದು ಸಂಜೆ 4-00 ಗಂಟೆಗೆ ಶ್ರೀ ಶಿವಬಸವೇಶ್ವರ ಕಲ್ಯಾಣ ಮಂಟಪ, ಹುಕ್ಕೇರಿಮಠ, ಹಾವೇರಿ ಇಲ್ಲಿ ಜರುಗಿದ 2002-2003ನೇ ಸಾಲಿನ 22ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ನಡವಳಿಗಳ ಅನುಮೋದನೆ.

***2.2 2003-2004ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಹಮ್ಮಿಕೊಂಡ ವಿವಿಧ ವೈಜ್ಞಾನಿಕ ಚಟುವಟಿಕೆಗಳ ಸಂಕ್ಷಿಪ್ತ ವರದಿ:***

ಅಧ್ಯಕ್ಷರೆ, ಕಾರ್ಯಕಾರಿ ಸಮಿತಿ ಸದಸ್ಯರೆ ಹಾಗೂ ಕರಾವಿಪ ದಾನಿ ಸದಸ್ಯರೆ, ದಾನಿ ಸಂಸ್ಥೆಯ ಪ್ರತಿನಿಧಿಗಳೇ ಹಾಗೂ ಕರಾವಿಪ ಘಟಕಗಳ ಸಂಚಾಲಕ ಮಿತ್ರರೆ,

ಕರಾವಿಪದ 2003-04ನೇ ಸಾಲಿನ ವರದಿಯನ್ನು ತಮ್ಮ ಮುಂದಿಡಲು ಸಂತೋಷಿಸುತ್ತೇನೆ. ಕರಾವಿಪ ಆರಂಭವಾದ ದಿನದಿಂದ ಭಾರತೀಯ ವಿಜ್ಞಾನ ಮಂದಿರದ ಆವರಣದಲ್ಲಿ ಕಾರ್ಯನಿರ್ವಹಿಸುತ್ತಾ ಬಂದಿದೆ. ಇಪ್ಪತ್ತ ಮೂರು ವರ್ಷಗಳ ಸಾರ್ಥಕ ಕೆಲಸಗಳನ್ನು ಮಾಡುತ್ತಾ ಬಂದಿರುವ ಕರಾವಿಪಕ್ಕೆ ತನ್ನದೇ ಆದ ಕಟ್ಟಡವಿಲ್ಲದಿರುವುದು ಒಂದು ದೊಡ್ಡ ಕೊರತೆಯಾಗಿತ್ತು. ಇದನ್ನು ಮನಗಂಡ ಕರಾವಿಪ ಮಹಾಪೋಷಕರಾದ ಡಾ.ಎಚ್.ನರಸಿಂಹಯ್ಯನವರು ಬೆಂಗಳೂರಿನಲ್ಲಿ ವಿಶಾಲವಾದ ನಿವೇಶನವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಒದಗಿಸಿಕೊಟ್ಟರು. ಈ ನಿವೇಶನದಲ್ಲಿ ದಿನಾಂಕ 2-2-2004ರಂದು ಕರ್ನಾಟಕ ಸರ್ಕಾರದ ಮುಖ್ಯ ಮಂತ್ರಿಗಳಾದ ಮಾನ್ಯ ಶ್ರೀ.ಎಸ್.ಎಂ.ಕೃಷ್ಣರವರು ಸಂಜೆ 5-30 ಗಂಟೆಗೆ **"ಕರಾವಿಪ ವಿಜ್ಞಾನ ಭವನ"**ದ ಶಂಕುಸ್ಥಾಪನೆಯನ್ನು ನೆರವೇರಿಸಿದರು. ಈಗಾಗಲೇ ವಿಜ್ಞಾನ ಭವನದ ಮೊದಲ ಹಂತದ ನಿರ್ಮಾಣ ಅಂತಿಮ ಹಂತಕ್ಕೆ ಬಂದಿದೆ. ದಾನಿಗಳಿಂದ, ಆಶಾಕಿರಣ ಯೋಜನೆಯ ಮೂಲಕ ಸಮಸ್ತ ಕನ್ನಡಿಗರಿಂದ ದೇಣಿಗೆ ಪಡೆಯುವ ಕಾರ್ಯ ನಡೆದಿದೆ.

ಪ್ರಸಕ್ತ ಸಾಲಿನಲ್ಲೂ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಜನಪ್ರಿಯಗೊಳಿಸುವ ಹಾಗು ಸಂವಹನದ ಪ್ರಮುಖ ಕಾರ್ಯಚಟುವಟಿಕೆಗಳು ಮುಂದುವರಿದು ಜಾರಿಗೊಂಡವು. ಬಾಲವಿಜ್ಞಾನ ಮಾಸಿಕ ಪ್ರಕಟಣೆ, ಅಧ್ಯಾಪಕರಿಗೆ, ವಿದ್ಯಾರ್ಥಿಗಳಿಗೆ ವೈಜ್ಞಾನಿಕ ತರಬೇತಿ ಕಾರ್ಯಾಗಾರಗಳು, ವಿದ್ಯಾರ್ಥಿ ಸಮುದಾಯದಲ್ಲಿ ಸಂಶೋಧನಾ ಮನೋಭಾವವನ್ನು ವರ್ಧಿಸುವಂತಹ ಅಖಿಲ ಕರ್ನಾಟಕ ಮಕ್ಕಳ ವಿಜ್ಞಾನ ಸಮಾವೇಶದ ಸಂಘಟನೆ, ಜನಸಾಮಾನ್ಯರಲ್ಲಿ ಪರಿಸರ ಜಾಗ್ರತಿ ಮೂಡಿಸುವ ಕಾರ್ಯಕ್ರಮವಾಗಿ ರಾಷ್ಟ್ರೀಯ ಪರಿಸರ ಜಾಗ್ರತಿ ಆಂದೋಲನ, ವಿಜ್ಞಾನ ಮತ್ತು ತಂತ್ರಜ್ಞಾನ ಪ್ರಾಮುಖ್ಯತೆಯ ರಾಷ್ಟ್ರೀಯ ದಿನಾಚರಣೆಗಳು, ಸಮುದಾಯದ ಭಾಗವಹಿಸುವಿಕೆಯನ್ನು ಪ್ರಚೋದಿಸುವ ಗ್ರಾಮೀಣ ಶಾಲಾ ವಿಜ್ಞಾನ ಕೇಂದ್ರಗಳ ಅನುಷ್ಠಾನ ಮುಂತಾದವು ನಡೆಯುತ್ತಾ ಬಂದಿವೆ.

ಸ್ಥಳೀಯ ಜನಸಮುದಾಯದಲ್ಲಿ ವೈಜ್ಞಾನಿಕ ಮನೋಭಾವ ಮತ್ತು ಚಿಂತನೆಯನ್ನು ವರ್ಧಿಸುವ ನಿಟ್ಟಿನಲ್ಲಿ ಕರಾವಿಪದ ಅಂಗ ಸಂಸ್ಥೆಗಳಾದ ಘಟಕಗಳು, ಗ್ರಾಮೀಣ ಶಾಲಾ ವಿಜ್ಞಾನ ಕೇಂದ್ರಗಳು, ದೊಡ್ಡ ಪ್ರಮಾಣದ ವಿಜ್ಞಾನದ ಕೇಂದ್ರಗಳು ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸಿದವು ಮತ್ತು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿಗೆ ವಿಜ್ಞಾನದ ಪ್ರಚಾರ ಕಾರ್ಯದಲ್ಲಿ ಸಹಯೋಗವನ್ನು ಒದಗಿಸಿದವು. ಘನ ರಾಜ್ಯ ಸರ್ಕಾರವು ಕರಾವಿಪದ ಉದ್ದಿಶ್ಯಗಳನ್ನು ಸಾಧಿಸುವಲ್ಲಿ ಪ್ರಸಕ್ತ ಸಾಲಿಗೆ ರೂ.8.00 ಲಕ್ಷಗಳ ವಾರ್ಷಿಕ ಅನುದಾನವನ್ನು ಒದಗಿಸಿತು. ರಾಜ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಮತ್ತು ಶಿಕ್ಷಣ ಇಲಾಖೆಗಳು ನಿರ್ದಿಷ್ಟ ವಿವಿಧ ಕಾರ್ಯಕ್ರಮಗಳಿಗೆ ಆರ್ಥಿಕ ಅನುದಾನದ ನೆರವನ್ನು ಒದಗಿಸಿದವು. ಭಾರತ ಸರ್ಕಾರದ ರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರಜ್ಞಾನ ಸಂವಹನ ಮಂಡಳಿ, ಪರಿಸರ ಮತ್ತು ಅರಣ್ಯ ಸಚಿವಾಲಯಗಳು, ವಿವಿಧ ನಿರ್ದಿಷ್ಟ ಕಾರ್ಯಚಟುವಟಿಕೆಗಳಿಗೆ ಅನುದಾನದ ಸಹಯೋಗವನ್ನು ಒದಗಿಸಿದವು.

ಪ್ರತಿಷ್ಠಿತ ಬಾಲವಿಜ್ಞಾನ ಮಾಸಪತ್ರಿಕೆಯನ್ನು ರಾಜ್ಯ ಶಿಕ್ಷಣ ಇಲಾಖೆಯು ತನ್ನ 10,000 ಶಾಲೆಗಳಿಗೆ ಸಗಟಾಗಿ ಖರೀದಿಸಿತು. ಬಾಲವಿಜ್ಞಾನ ಮಾಸಿಕವು ಪ್ರಸಕ್ತ ಸಾಲಿನಲ್ಲಿ ಮಾಸಿಕ ಸರಾಸರಿ 15,000ಗಳಂತೆ ಮುದ್ರಣಗೊಂಡಿತು.

ಪ್ರಸಕ್ತ ಸಾಲಿನಲ್ಲಿ ಒಟ್ಟಾರೆ ರೂ.24,69,457-00ಗಳಷ್ಟು ಮೊತ್ತವನ್ನು ವಿನಿಯೋಗಿಸಲಾಯಿತು. ರೂ.2,70,130-00ಗಳ ಪುಸ್ತಕ ಮಾರಾಟ ವಹಿವಾಟನ್ನು ನಿರ್ವಹಿಸಲಾಯಿತು. ವಿಜ್ಞಾನ ಮಾದರಿಗಳ ಮಾರಾಟದಲ್ಲಿ ರೂ.1,54,966-00ಗಳನ್ನು ನಿರ್ವಹಿಸಲಾಯಿತು ಮತ್ತು ರೂ.8,31,516-00ಗಳ ಕೊರತೆಯನ್ನು ಗುರುತಿಸಲಾಯಿತು. ದಿನಾಂಕ 31-3-2004ರ ಅಂತ್ಯಕ್ಕೆ ಕರಾವಿಪದಲ್ಲಿ ರೂ.9,58,914-80ಗಳ ಮೊತ್ತದ ಪುಸ್ತಕಗಳು ದಾಸ್ತಾನಿರುತ್ತದೆ.

***3. 2003-2004ನೇ ಸಾಲಿನಲ್ಲಿ ಕರಾವಿಪ ಹಮ್ಮಿಕೊಂಡ ಚಟುವಟಿಕೆಯಾಧಾರಿತ ವರದಿ:***

**3.1 ಬಾಲವಿಜ್ಞಾನ ಮಾಸಪತ್ರಿಕೆ ಪ್ರಕಟಣೆ :**

ಪ್ರೊ.ಎಂ.ಆರ್.ನಾಗರಾಜು, ಪ್ರಧಾನ ಸಂಪಾದಕರು, ಬಾಲವಿಜ್ಞಾನ ಮಾಸಿಕ, ಇವರಿಂದ ವರದಿ ಮಂಡನೆ.

**3.2 ರಾಷ್ಟ್ರೀಯ ಪರಿಸರ ಜಾಗ್ರತಿ ಆಂದೋಲನ 2002-2003:**

ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಸಚಿವಾಲಯದ ಸಹಯೋಗದಲ್ಲಿ ರಾಜ್ಯಾದ್ಯಂತ ರಾಷ್ಟ್ರೀಯ ಪರಿಸರ ಜಾಗ್ರತಿ ಆಂದೋಲನವನ್ನು 2002-2003ನೇ ಸಾಲಿಗೆ "ನೀರು ಜೀವನ ಸಂಜೀವಿನಿ" ಶೀರ್ಷಿಕೆಯಡಿ ಸಂಘಟಿಸಲಾಯಿತು.

ಪೂರ್ವಾಂದೋಲನ ಕಾರ್ಯಾಗಾರವನ್ನು ಬೆಂಗಳೂರಿನಲ್ಲಿ ದಿನಾಂಕ 21-4-2003ರಂದು ಭಾರತೀಯ ವಿಜ್ಞಾನ ಮಂದಿರದ ಚೋಕ್ಸಿ ಸಭಾಂಗಣದಲ್ಲಿ ಆಯೋಜಿಸಲಾಗಿ ರಾಜ್ಯದ ವಿವಿಧ ಭಾಗಗಳ 131 ಶಿಕ್ಷಣ/ಸಂಘ-ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಆಂದೋಲನವನ್ನು ಶ್ರೀಮತಿ.ನಫೀಸ್ ಫಜಲ್, ಮಾನ್ಯ ಸಚಿವರು, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಭಾರತೀಯ ವೈದ್ಯ ಪದ್ಧತಿಗಳ ಖಾತೆ, ಕರ್ನಾಟಕ ಸರ್ಕಾರ - ಇವರು ಉದ್ಘಾಟಿಸಿದರು. ಇದೇ ದಿನದಂದು ರೂ.5,36,690-00ಗಳನ್ನು ಡಿ.ಡಿ. /ಚೆಕ್ ಮುಖೇನ ಅನುದಾನವಾಗಿ ಸಂಘ ಸಂಸ್ಥೆಗಳಿಗೆ ವಿತರಿಸಲಾಯಿತು.

3.3. ಬಾಲವಿಜ್ಞಾನ ಸಂಪಾದಕ ಸಮಿತಿ ಸಭೆ:

ಬಾಲವಿಜ್ಞಾನ ಸಂಪಾದಕ ಸಮಿತಿ ಸಭೆಯು ದಿನಾಂಕ 19-4-2003ರಂದು ಕರಾವಿಪ ಕಚೇರಿ, ಬೆಂಗಳೂರಿನಲ್ಲಿ ಜರುಗಿತು.

ದಿನಾಂಕ 1-6-2003ರಂದು ಕರಾವಿಪ ಕೇಂದ್ರ ಕಚೇರಿಯಲ್ಲಿ ಜರುಗಿ ಬಾಲವಿಜ್ಞಾನ ಬೆಳ್ಳಿ ಮಹೋತ್ಸವ ಆಚರಣೆ ಕುರಿತ ಶಿಫಾರಸ್ಸನ್ನು ಕೈಗೊಂಡಿರುತ್ತದೆ. ರಾಜ್ಯದ ನಾಲ್ಕು ವಲಯ ವಿಭಾಗಗಳಲ್ಲಿ ಬಾಲವಿಜ್ಞಾನ ಬೆಳ್ಳಿಮಹೋತ್ಸವ ಆಚರಣೆ ಜಿಲ್ಲಾ ಸ್ತರದ ಚಟುವಟಿಕೆಗಳನ್ನು ಕೈಗೊಳ್ಳುವ ಕುರಿತಾಗಿ ಚರ್ಚಿಸಿರುತ್ತದೆ.

ಬಾಲವಿಜ್ಞಾನ ಸಂಪಾದಕರ ಸಮಿತಿ ಸಭೆಯು ದಿ. 3-8-2003 ರಂದು ಕರಾವಿಪ ಕೇಂದ್ರ ಕಚೇರಿಯಲ್ಲಿ ಜರುಗಿತು. ಸಭೆಯಲ್ಲಿ ಬರುವ 3 ತಿಂಗಳಲ್ಲಿ ಪ್ರಕಟಗೊಳ್ಳುವ ಬಾಲವಿಜ್ಞಾನ ಲೇಖನಗಳ ಸಂಪಾದಕ ಕಾರ್ಯವನ್ನು ಜರುಗಿಸಲಾಯಿತು.

3.4 ಪಾಂಡಿಚೇರಿಯಲ್ಲಿ 24-5-2003ರಂದು ಎ.ಐ.ಪಿ.ಎಸ್.ಎನ್. ಪ್ರಾಂತೀಯ ಸಭೆಯಲ್ಲಿ ಕರಾವಿಪವನ್ನು ಶ್ರೀ.ಬಿ.ಎಸ್.ಸೊಪ್ಪಿನ ಮತ್ತು ಶ್ರೀ.ದಾನಿಬಾಬುರಾವ್ ಪ್ರತಿನಿಧಿಸಿದ್ದರು.

3.5 2004ನೇ ವರ್ಷವನ್ನು ವೈಜ್ಞಾನಿಕ ಅರಿವಿನ ವರ್ಷವನ್ನಾಗಿ ಆಚರಿಸುವ ಕುರಿತ ಸಮಾಲೋಚನಾ ಸಭೆ:

(i) ಭಾರತ ಸರ್ಕಾರವು 2004ನೇ ವರ್ಷವನ್ನು ವೈಜ್ಞಾನಿಕ ಅರಿವಿನ ವರ್ಷವನ್ನಾಗಿ ಆಚರಿಸುವ ಕಾರ್ಯಸೂಚಿಯನ್ನು ಹೊಂದಿದ್ದು ಈ ಕುರಿತ ಸಮಾಲೋಚನಾ ಸಭೆಯು ಮೇ 28 ಮತ್ತು 29, 2003ರಂದು ಜರುಗಿದಂತ ಕರಾವಿಪವನ್ನು ಶ್ರೀ.ಬಿ.ಬಿ.ಹಂಡರಗಲ್ ಅವರು ಪ್ರತಿನಿಧಿಸಿದ್ದರು.

ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ, ಭಾರತ ಸರ್ಕಾರವು ಕರಾವಿಪ ಕೇಂದ್ರ ಕಚೇರಿಯನ್ನು ಪಶ್ಚಿಮ ವಲಯದ ಸಾಗರ ತೀರ ಜಿಲ್ಲೆಗಳ ಚಟುವಟಿಕೆಗಳಿಗೆ ಸ್ಥಳೀಯ ಸಂಯೋಜನಾ ಕೇಂದ್ರವನ್ನಾಗಿ ನಿಯುಕ್ತಿಗೊಳಿಸಿದೆ.

3.6 ಕರಾವಿಪ ಪರಿಸರ ಉಪಸಮಿತಿ ಸಭೆ:

ಕರಾವಿಪ ಪರಿಸರ ಉಪಸಮಿತಿ ಸಭೆಯು 4-5-2003ರಂದು ಕರಾವಿಪ ಕೇಂದ್ರ ಕಚೇರಿಯಲ್ಲಿ ಜರುಗಿ ಕರಾವಿಪ ವತಿಯಿಂದ ಪರಿಸರ ಕ್ವಿಜ್, ಪುಸ್ತಕ ಪ್ರಕಟಣೆ, 2003ರ ವರ್ಷವನ್ನು ಕೆರೆಗಳು ಮತ್ತು ನೀರು ಶೀರ್ಷಿಕೆಯಡಿ ಆಚರಣೆ, ನವೆಂಬರ್ ಮಾಸವನ್ನು ರಾಜ್ಯಾದಂತ ಪ್ಲಾಸ್ಟಿಕ್ ಆವಾಂತರ ಕುರಿತ ಆಂದೋಲನವನ್ನು ಆಚರಿಸಲು ಶಿಫಾರಸ್ಸು ಮಾಡಿರುತ್ತದೆ.

ಈ ಸಭೆಯ ನಡವಳಿಗಳ ಮೇಲೆ ಕೈಗೊಂಡ ಕ್ರಮಗಳಾಗಿ ಕರಾವಿಪದ ಅಂಗ ಸಂಸ್ಥೆಗಳಿಗೆ 2003ನೇ ವರ್ಷವನ್ನು ಕೆರಗಳು ಮತ್ತು ನೀರು ಶೀರ್ಷಿಕೆಯಡಿ ವಿಶ್ವಪರಿಸರ ದಿನಾಚರಣೆಯನ್ನು ಆಚರಿಸಲು ಸುತ್ತೋಲೆಯನ್ನು ಹೊರಡಿಸಲಾಗಿದೆ ಹಾಗೂ ಅನುದಾನವನ್ನು ಕೋರಿ ಸಂಬಂಧಿತ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

**3.7. ಪ್ರಕಟಣಾ ಉಪ ಸಮಿತಿ ಸಭೆ:**

ದಿನಾಂಕ 22-5-2003ರಂದು ಕರಾವಿಪ ಕೇಂದ್ರ ಕಚೇರಿಯಲ್ಲಿ ಪ್ರಕಟಣಾ ಉಪಸಮಿತಿ ಸಭೆಯು ಜರುಗಿ ಕರಾವಿಪದ ಮುಂಬರುವ ಪ್ರಕಟಣೆಗಳನ್ನು ರೂ.50-00ಕ್ಕಿಂತ ಕಡಿಮೆ ಮುಖಬೆಲೆಯ ದರದಲ್ಲಿ ಪ್ರಕಟಿಸುವುದು ಒಂದೇ ದಿನದಲ್ಲಿ ರೂ.1.00 ಕೋಟಿ ಮೌಲ್ಯದ ಪುಸ್ತಕ ಮಾರಾಟ ಆಯೋಜನೆಯ ರೂಪುರೇಷೆಯನ್ನು ಚರ್ಚಿಸಲಾಯಿತು.

**3.8 ಗ್ರಾಮೀಣ ಶಾಲಾ ವಿಜ್ಞಾನ ಕೇಂದ್ರಗಳ ಸಭೆ:**

ದಿನಾಂಕ 22-5-2003ರಂದು ಕರಾವಿಪ ಕೇಂದ್ರ ಕಚೇರಿಯಲ್ಲಿ ಗ್ರಾಮೀಣ ಶಾಲಾ ವಿಜ್ಞಾನ ಕೇಂದ್ರಗಳ ಉಪಸಮಿತಿ ಸಭೆಯು ಜರುಗಿತು.

ದಿ. 6-8-2003 ರಂದು ಗ್ರಾಮೀಣ ಶಾಲಾ ವಿಜ್ಞಾನ ಕೇಂದ್ರ (2002-03) ವಿಜ್ಞಾನ ಪರಿಕರಗಳ ಸರಬರಾಜು ಕುರಿತ ಟೆಂಡರ್ ಜಾಹೀರಾತನ್ನು ಪ್ರಕಟಿಸಲಾಯಿತು. ದಿ. 26-8-2003 ರಂದು ಈ ಜಾಹೀರಾತಿನ ಅನ್ವಯ ವಿವಿಧ 6 ಸರಬರಾಜುದಾರರಿಂದ ಕೋಟೇಷನ್‌ಗಳನ್ನು ಸ್ವೀಕರಿಸಲಾಯಿತು.

**3.9 ರಾಷ್ಟ್ರೀಯ ಪರಿಸರ ಜಾಗ್ರತಿ ಆಂದೋಲನ-2003:**

